ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 8 ಫೆಬ್ರವರಿ 22, 1981 ಬೆಲೆ : 50 ಪೈಸೆ

ದಿಲ್ಲಿಯ ರೈತರ ಮೇಳ ಸಾಧಿಸಿದುದೇನು?

25.000 ಬಸ್ಸುಗಳು, 135 ರೈಲುಗಳು, ಸಾವಿರಾರು ಟ್ರಕ್ಕುಗಳು, ನೂರಾರು ಟ್ರ್ಯಾಕ್ಟರುಗಳನ್ನು 'ಬಲಾತ್ಕಾರದಿಂದ ಎಂಬಂತೆ ಎಲ್ಲಾ ಕಾಂಗ್ರೆಸ್ (ಐ) ರಾಜ್ಯ ಸರ್ಕಾರೀ ಯಂತ್ರಗಳ ಮೂಲಕ ಉಪಯೋಗಿಸಿಕೊಂಡು' ದಿಲ್ಲಿಯಲ್ಲಿ ಸುಮಾರು 10 ಲಕ್ಷದಷ್ಟು ಜನರನ್ನು ರೈತರ ಹೆಸರಿನಲ್ಲಿ ಜಮಾಯಿಸಿ ಫೆಬ್ರವರಿ 16ರಂದು ಇಂದಿರಾ ಕಾಂಗ್ರೆಸ್ ಪಕ್ಷವು ನಡೆಸಿದ ರೈತರ ಮೇಳ ಸಾಧಿಸಿದುದೇನು ?

ಈ ಮೇಳವನ್ನು ಯಶಸ್ವಿಮಾಡಲು ಕಾಂಗ್ರೆಸ್ (ಐ) ಎಂ. ಪಿ. ಗಳು, ಎಂ. ಎಲ್. ಎ.ಗಳು ಮಂತ್ರಿಗಳು ಮತ್ತು ವಿಶೇಷವಾಗಿ ಮುಖ್ಯಮಂತ್ರಿಗಳು ಫ್ರೀ-ಟ್ರಿಪ್ ಮತ್ತು ತಲಾ ಒಬ್ಬರಿಗೆ ರೂ. 100ರಂತೆ ಧಾರಾಳವಾಗಿ ರೂ. 100 ಕೋಟಿಗಿಂತಲೂ ಅಧಿಕ ಹಣ ಖರ್ಚು ಮಾಡಿ ಶ್ರೀಮತಿ ಇಂದಿರಾಗಾಂಧಿ ಸಾಧಿಸಿದುದೇನು ?

ಕಳೆದ ಒಂದು ವರ್ಷದಲ್ಲಿ ದೇಶದಾದ್ಯಂತ ಎಂಬಂತೆ ಹೆಚ್ಚಿನ ರಾಜ್ಯಗಳಲ್ಲಿ ರೈತರು ತಮ್ಮ ಮುಖ್ಯ ಪ್ರಶ್ನೆಗಳನ್ನು ಮುಂದಿಟ್ಟು- ಸಾಲ ರದ್ಧತಿ, ಕೃಷಿ ಉತ್ಪನ್ನಗಳಿಗೆ ನ್ಯಾಯಬೆಲೆ, ಬರಗಾಲ ಪರಿಹಾರ ಇತ್ಯಾದಿ- ನಡೆಸಿದ ಸಮರಧೀರ ಹೋರಾಟಗಳನ್ನೂ, ತ್ಯಾಗಬಲಿದಾನಗಳನ್ನು

ಸಂಪಾದಕೀಯ

ಮೇಲಿಂದ ಮೇಲಿಂದ ದೂಷಿಸಿ ಕೊನೆಗಾದರೂ ಇಂದಿರಾಗಾಂಧಿ ದಿಲ್ಲಿ ರೈತಮೇಳದ ಮೂಲಕ ಸಾಧಿಸಿದುದಾದರೂ ಏನು ?

ರೈತರು ಕಾರ್ಮಿಕ-ನೌಕರರ ಹಾಗೆ ಹೋರಾಟದ ಕಣದಲ್ಲಿ ಇಳಿಯಬೇಕಿಲ್ಲವೆಂದೂ, ಕಾಂಗ್ರೆಸ್ (ಐ) ಪಕ್ಷದ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳು ರೈತರ ಎಲ್ಲಾ ಪ್ರಶ್ನೆಗಳನ್ನು ಇತ್ಯರ್ಥಮಾಡುವುದೆಂದೂ ಶ್ರೀಮತಿ ಇಂದಿರಾಗಾಂಧಿ, ಅಂಟುಲೆ, ಗುಂಡೂರಾವ್ ಇವರಿಂದ ಹಿಡಿದು ಜಿಲ್ಲೆಯ ಕಾಂಗ್ರೆಸ್ (ಐ) ಪುಢಾರಿಗಳವರೆಗೆ 'ಜಗಜ್ಜಾಹಿರ' ಗೊಳಿಸುತ್ತಿದ್ದರು.

'ರೈತರ ಬಗ್ಗೆ ಸಹಾನುಭೂತಿಯನ್ನು ದಿನನಿತ್ಯವೂ ವ್ಯಕ್ತಪಡಿಸುತ್ತಿದ್ದ ಶ್ರೀಮತಿ ಇಂದಿರಾಗಾಂಧಿಯವರು' ದಿಲ್ಲಿ ರೈತರ ಮೇಳದಲ್ಲಿ ರೈತರ ಮುಖ್ಯ ಪ್ರಶ್ನೆಗಳಿಗೆ ಪರಿಹಾರ ಸೂಚಿಸುವರು ಎಂಬ ಅಭಿಪ್ರಾಯವು ಜನಜನಿತವಾಗಿತ್ತು.

ಆದರೆ ಸುಮಾರು ಒಂದೂವರೆ ಗಂಟೆಕಾಲ ದಿಲ್ಲಿ ಮೇಳದಲ್ಲಿ ಭಾಷಣವನ್ನಿತ್ತ ಶ್ರೀಮತಿಗಾಂಧಿಯವರು ರೈತರಿಗೆಕೊಟ್ಟ ಸಲಹೆ : ದೇಶದ ಹಿತದೃಷ್ಟಿಯಲ್ಲಿ ರೈತರಾದ ನೀವು ತಾಳ್ಮೆಯಿಂದಿರಬೇಕು. ಎಲ್ಲವನ್ನು ಪರಿಗಣನೆತೆಗೆದುಕೊಂಡು ನಾನು ನಿಮ್ಮ ಹಿತಸಾಧಿಸುತ್ತೇನೆ!

(ಕಡೇ ಪುಟ ನೋಡಿ)

ಮಾರ್ಚ್ ೨೮ ರಂದು ನಿರುದ್ಯೋಗ-ವಿರೋಧಿ ದಿನಾಚರಣೆ

ಫೆ. 18 ಮತ್ತು 19ರಂದು ಬೆಂಗಳೂರಿನಲ್ಲಿ ಡಿ.ವೈ.ಓ.ನ ವಿಸ್ತೃತ ರಾಜ್ಯಸಮಿತಿ ಸಭೆಸೇರಿತ್ತು. ವಿಶೇಷ ಆಹ್ವಾನಿತರಾಗಿ ಡಿ.ವೈ.ಎಫ್.ಐ.ನ ಅಖಿಲಭಾರತ ಪ್ರಧಾನಕಾರ್ಯದರ್ಶಿ ಕಾಂ. ಹನ್ನನ್‌ಮೊಲ್ಲಾ (ಎಂ. ಪಿ.) ದ್ದರು.

ಮಾರ್ಚ್ 28ರಂದು ಅಖಿಲ ಭಾರತ ಮಟ್ಟದಲ್ಲಿ ಆಚರಿಸಲಾಗುವ ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ ರಾಜ್ಯದಲ್ಲೂ ಬೃಹತ್‌ಮಟ್ಟದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳುವ ತೀರ್ಮಾನ ಕೈಗೊಳ್ಳಲಾಯಿತು.

ಕಳೆದ ವರ್ಷ ಲೂಧಿಯಾನಾದಲ್ಲಿ ನಡೆದ ಡಿ.ವೈ.ಎಫ್.ಐ.ನ ಪ್ರಥಮ ಸಮ್ಮೇಳನದ ವರದಿಯನ್ನು ತೀರ್ಮಾನಗಳನ್ನು ಮತ್ತು ಡಿ.ವೈ.ಎಫ್.ಐ.ನ ಸಂಘಟನೆಗೆ ಪ್ರೇರಣೆ ನೀಡಿದ ಅಂಶಗಳನ್ನು ಪ್ರಸ್ತಾಪಿಸುತ್ತಾ ಕಾಂ. ಹನ್ನನ್‌ಮೊಲ್ಲಾ, ಯುವಜನತೆಯ ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತ ಹೋರಾಟದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಈ ಹೋರಾಟ ಇತರ ದುಡಿಯುವ ವರ್ಗಗಳೊಟ್ಟಿಗೇ ಜೊತೆಜೊತೆಯಾಗಿ ನಡೆಯಬೇಕು. ಒಟ್ಟು 18 ರಾಜ್ಯಗಳಲ್ಲಿ ಸಂಘಟಿತವಾಗಿರುವ ಡಿ.ವೈ.ಎಫ್.ಐ.ನ ಸದಸ್ಯ ಬಲ 15 ಲಕ್ಷಕ್ಕಿಂತಲೂ ಅಧಿಕವಾಗಿದೆ. ನಿಮ್ಮ ರಾಜ್ಯದಲ್ಲೂ ಸಂಘಟನೆಯನ್ನು ಬಲಪಡಿಸಿ ಯುವಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಡಲು ಅಣಿಮಾಡಿ" ಎಂದರು.

ರಾಜ್ಯದ ವಿವಿಧ ಭಾಗಗಳಿಂದ ಬಂದ 39 ಪ್ರತಿನಿಧಿಗಳು ಆಗಮಿಸಿದ್ದರು. ಮುಂದಿನ ಜೂನ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಡಿ.ವೈ.ಓ.ನ ರಾಜ್ಯ ಸಮ್ಮೇಳನದ ನಂತರ ಡಿ.ವೈ.ಓ.ವನ್ನು ಡಿ. ವೈ. ಎಫ್. ಐ. ಗೆ ಸಂಯೋಜಿಸುವ ತೀರ್ಮಾನ ಮಾಡಲಾಯಿತು.

ಮಾ. 28ರಂದು ನಡೆಯಲಿರುವ ನಿರುದ್ಯೋಗ ವಿರೋಧಿ ದಿನಾಚರಣೆಯ ಪೂರ್ವಭಾವಿಯಾಗಿ ಪ್ರತಿ ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿ, ಬೆಂಗಳೂರಿನಲ್ಲಿ ನಡೆಯಲಿರುವ ಈ ಬೃಹತ್ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ಯುವಜನತೆ ಪಾಲ್ಗೊಳ್ಳುವಂತೆ ಯತ್ನಿಸಬೇಕೆಂದು ಡಿ. ವೈ. ಓ.ನ ರಾಜ್ಯ ಸಂಚಾಲಕ ಕಾಂ. ಜಿ.ವಿ. ಶ್ರೀರಾಂರೆಡ್ಡಿ ಕರೆ ನೀಡಿದ್ದಾರೆ.

○

-ಜನತೆಗೆ ಕೇಂದ್ರ ಸಮಿತಿಯ ಕರೆ

ಹೋರಾಟಕ್ಕೆ ಸಿದ್ಧರಾಗಿ

ಪಾರ್ಲಿಮೆಂಟಿನ ಬಜೆಟ್ ಅಧಿವೇಶನದ ಪೂರ್ವದಲ್ಲಿ ಸೇರುತ್ತಿರುವ ಪಕ್ಷದ ಕೇಂದ್ರ ಸಮಿತಿ, ತಮ್ಮ ಜೀವನ ಮಟ್ಟದ ಮೇಲೆ ಒಂದು ದೊಡ್ಡ ಆಘಾತಕ್ಕೆ ತಯಾರಾಗಿರಬೇಕೆಂದು ಜನರನ್ನು ಎಚ್ಚರಿಸುತ್ತದೆ. ಈ ಕಳೆದ ಬಜೆಟ್ ನಂತರದ, ಈಗ ತಾನೆ ಕಳೆದಿರುವ ಆರ್ಥಿಕ ವರ್ಷದಲ್ಲಿ, ಜನರು ಹಣದುಬ್ಬರದಿಂದ, ಏರುತ್ತಿರುವ ಬೆಲೆಗಳಿಂದ, ನಿರುದ್ಯೋಗದಿಂದ ಕಂಗೆಟ್ಟರು. ಮುಂಬರುವ ಆರ್ಥಿಕ ವರ್ಷದಲ್ಲಿ ಪರಿಸ್ಥಿತಿ ಇನ್ನೂ ಹದಗೆಡುವ ಸಾಧ್ಯತೆ ಇದೆ. ಇಂದಿರಾ ಸರ್ಕಾರದ ಆರನೇ ಪಂಚವಾರ್ಷಿಕ ಯೋಜನೆ ನಿಜವಾಗಿಯೂ ಬಡವರ ಆದಾಯವನ್ನು ಕಡಿಮೆ ಮಾಡುವ, ಹಣದುಬ್ಬರದಿಂದ ಕೂಡಿದ ಬೆಲೆ ಏರಿಕೆಯ ಯೋಜನೆಯೆಂದೇ ಹೇಳಬಹುದು.

ಕಾಂಗ್ರೆಸ್(ಐ)ನ ಬೂರ್ಜ್ವಾ-ಜಮೀಂದಾರ ಸರ್ಕಾರ ಗುತ್ತೇದಾರಿ ಮತ್ತು ವಿದೇಶಿ ಬಂಡವಾಳಶಾಹಿಯನ್ನು ಹತ್ತಿಕ್ಕುವ ಬದಲು ಅವರಿಗೆ ಇನ್ನೂ ಹೆಚ್ಚಿನ ರಿಯಾಯಿತಿಗಳನ್ನು ಕೊಡುತ್ತದೆ. ಕಾರ್ಮಿಕರು, ರೈತರು ಮತ್ತು ಜನಸಾಮಾನ್ಯರ ಮೇಲೆ ಆಕ್ರಮಣ ನಡೆಸುತ್ತದೆ. ಆರ್ಥಿಕ ಬಿಕ್ಕಟ್ಟಿನ ಸಂಪೂರ್ಣ ಭಾರ ಅವರ ಮೇಲೆ ಹೊರೆಸಲು ಪ್ರಯತ್ನ ಮಾಡುತ್ತಿದೆ. ಜನಸಾಮಾನ್ಯರನ್ನು ತುಳಿಯಲು ಇನ್ನೂ ಹೆಚ್ಚು ದಮನಕಾರಿ ಅಧಿಕಾರಗಳನ್ನು ಹೊಂದುತ್ತಿದೆ.

ಯೋಜನೆಯಲ್ಲಿ 21,302 ಕೋಟಿ ರೂ.ಗಳಷ್ಟು ಅಧಿಕ ಸಂಪನ್ಮೂಲಗಳನ್ನು ಸೇರಿಸಲು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮತ್ತು ಅವರ ಉದ್ಯಮಗಳಿಗೆ ಕರೆಯುತ್ತಿದೆ. ಕೊರತೆ ಆರ್ಥಿಕ ಧೋರಣೆಯನ್ನು 500 ಕೋಟಿ ರೂ.ಗಳಷ್ಟಕ್ಕೆ 'ಸೀಮಿತ' ಗೊಳಿಸಲಾಗಿದೆ. ಈ 'ಸೀಮಿತ'ಗೊಳಿಸಲ್ಪಟ್ಟ ಕೊರತೆ ಆರ್ಥಿಕ ಧೋರಣೆಯ ಮೊತ್ತವೇ ತನ್ನನ್ನು ಎರಡು ಪಟ್ಟು ಮಾಡಿಕೊಳ್ಳುವ ಆಂತರಿಕ ಶಕ್ತಿ ಪಡೆದಿದೆ. ಇದರ ನೇರ ಪರಿಣಾಮ ಇನ್ನೂ ಹೆಚ್ಚಲಿರುವ ಹಣದುಬ್ಬರ ಮತ್ತು ಇದರಿಂದ ಜನರಿಗೆ ಒದಗಲಿರುವಸಂಕಟಗಳು. ನೇರ ತೆರಿಗೆಗಳ ಮೂಲಕ ಯೋಜನೆಗೆ ಸಂಪನ್ಮೂಲ ಸಂಗ್ರಹಿಸುವ ಸಾಧ್ಯತೆ ಬಹಳ ಕಡಿಮೆ ಎಂದು ಯೋಜನೆ ಸಾರುತ್ತದೆ. ಇದರ ಮೂಲಕ ದೊಡ್ಡ ಬಂಡವಾಳಿಗರ ಆದಾಯಗಳಿಗೆ ರಿಯಾಯಿತಿ ತೋರಿಸಲಾಗಿದೆ. ತೆರಿಗೆ ಕಳ್ಳತನವನ್ನು ತಡೆಯುವುದರ ಮೂಲಕವೇ ಸಾಕಷ್ಟು ಸಂಪನ್ಮೂಲ ಸಂಗ್ರಹಿಸಬಹುದೆಂದು ವಿಶ್ವಾಸ ವ್ಯಕ್ತಪಡಿಸಿದೆ. ಅದು "ತೆರಿಗೆಗಳ್ಳತನಕ್ಕೆ ಕುಮ್ಮಕ್ಕು ಕೊಡುವ ಮತ್ತು ಅವಕಾಶ ಮಾಡಿಕೊಡುವ ತೆರಿಗೆ ನೀತಿಯ ಕ್ರಿಯಾತ್ಮಕ ಸುಧಾರಣೆಯಿಂದ ತೆರಿಗೆಗಳ್ಳರಿಗೆ ಲಂಚದ ಆಮಿಷ ತೋರಿಸುವ" ಉದ್ದೇಶ ಹೊಂದಿದೆ. ಕಪ್ಪು ಹಣ ಸುಗ್ರೀವಾಜ್ಞೆಯಿಂದ ಸ್ಥಾಪಿಸಲ್ಪಟ್ಟಿರುವ ಬಾಂಡ್ ಯೋಜನೆಯಿಂದ ಕಪ್ಪುಹಣವನ್ನು ಕಾನೂನುಬದ್ಧಗೊಳಿಸುವ ಮೂಲಕ ಕಪ್ಪುಹಣ ಸಂಗ್ರಹಿಸಿಟ್ಟಿರುವ ಖದೀಮರಿಗೆ ಸುಗ್ಗಿಯಾಗಿದೆ.

ಯೋಜನಾಕಾರರ ಪ್ರಕಾರ, ಈಗಿದ್ದಂತೆ ಕೃಷಿ ಆದಾಯದ ಒಂದು ಶೇಕಡಾದಷ್ಟು ಸಹ ನೇರ ತೆರಿಗೆಗಳಿಲ್ಲ. ಆದರೂ ಕೃಷಿಕ್ಷೇತ್ರದ ದೊಡ್ಡ ಜಮೀನುದಾರರಿಗೆ ತೆರಿಗೆ ವಿಧಿಸಬೇಕೆಂದು ಸಲಹೆ ನೀಡುವ ಧೈರ್ಯ ಇವರು ತೋರಿಸಿಲ್ಲ. ವಿಚಾರಿಕವಾಗಿ ಕೃಷಿಕ್ಷೇತ್ರದಲ್ಲಿ ಹಂತ ಹಂತವಾಗಿ ತೆರಿಗೆ ವಿಧಿಸಬೇಕೆಂದು ಸೂಚಿಸಿದ್ದರೂ "ಉತ್ಪಾದನೆ ಮತ್ತು ಉತ್ಪಾದಕತೆ (productivity) ಹೆಚ್ಚಿಸಲು ನೀಡಿರುವ ಉತ್ತೇಜನಕ್ಕೆ ಇದರಿಂದ ಯಾವುದೇ ರೀತಿಯ ತೊಂದರೆಯಾಗದಂತೆ ಜಾಗ್ರತೆವಹಿಸಬೇಕು" ಎಂದು ಕೂಡಲೇ ಎಚ್ಚರಿಸಿದೆ.

ಹಳ್ಳಿಯ ಜನಸಮುದಾಯ ಮತ್ತು ಪಟ್ಟಣದ ಬಡಜನರನ್ನೇ ಎಲ್ಲಾ ರೀತಿಯ ಪರೋಕ್ಷ ತೆರಿಗೆಗಳಿಂದ ತಟ್ಟುವುದು. ಈಗಾಗಲೇ ಇವುಗಳಿಂದ ಇವರು ಸೋತುಸುಣ್ಣವಾಗಿ

(8ನೇ ಪುಟ ನೋಡಿ)

ಅಸ್ಪೃಶ್ಯರ ವಿಮೋಚನೆಗೆ ಜಗಜೀವನರಾಮರ ದಾರಿ

ಬಿ. ಟಿ. ರಣದಿವೆ

ಶ್ರೀ ಜಗಜೀವನರಾಮ್ ಅವರು ಬರೆದಿರುವ "ಕ್ಯಾಸ್ಟ್ ಚಾಲೆಂಜ್ ಇನ್ ಇಂಡಿಯಾ" ಎಂಬ ಪುಸ್ತಕವನ್ನು ಕಾಂ. ಬಿ. ಟಿ. ರಣದಿವೆ ಇಲ್ಲಿ ಪರಿಶೀಲಿಸಿದ್ದಾರೆ.

ಶ್ರೀಜಗಜೀವನರಾಮರು ಕಾಂಗ್ರೆಸ್ ಸಂಸ್ಥೆ ಮತ್ತು ಕೇಂದ್ರದ ಕಾಂಗ್ರೆಸ್ ಸರ್ಕಾರಗಳಲ್ಲಿ ಉನ್ನತ ಹುದ್ದೆಗಳನ್ನು ಆಕ್ರಮಿಸಿದ್ದ ಹರಿಜನ ನಾಯಕರಲ್ಲಿ ಅದ್ವಿತೀಯರು. ಸ್ವಾತಂತ್ರ್ಯ ಹೋರಾಟದಲ್ಲೂ ಅವರು ಭಾಗವಹಿಸಿದ್ದಾರೆ. ಆದ್ದರಿಂದ ಮೂರು ದಶಕಗಳ ಅನುಭವದಿಂದ ಅವರು ಬರೆದಿರುವುದಕ್ಕೆ ತುಂಬ ಪ್ರಾಮುಖ್ಯ ಇರುತ್ತದೆ.

ದೇಶದಲ್ಲಿ ಅಸ್ಪೃಶ್ಯರ ಸ್ಥಿತಿಗತಿಗಳ ಬಗ್ಗೆ ಜಗಜೀವನರಾಮ್ ಮುಖ್ಯವಾಗಿ ಬರೆಯುತ್ತಾರೆ. ಹಾಗೆ ಬರೆಯುವಾಗ ಸಮರ್ಥನೀಯವಾದ ಭಾವೋದ್ರೇಕವೂ ಅವರಿಗಿದೆ. ಜಾತಿ ಪ್ರಜ್ಞೆ ಅಥವಾ ಅಸ್ಪೃಶ್ಯತಾ ಆಚರಣೆಯ ಇಳಿವಿನ ಬಗ್ಗೆ ಅವರು ಸುಮ್ಮನೆ ಏನನ್ನೂ ಹೇಳುವುದಿಲ್ಲ. ಅವರೂ ಒಂದು ಭಾಗವಾಗಿದ್ದ ಮೂರು ದಶಕಗಳ ಕಾಂಗ್ರೆಸ್ ನೇತೃತ್ವವು ದೇಶದ ಅಸ್ಪೃಶ್ಯರ ನರಳಾಟದಲ್ಲಿ ಯಾವ ಬದಲಾವಣೆಯನ್ನೂ ತರಲಿಲ್ಲ ಎಂದು ಅವರಿಗೆ ಹೇಳುವುದು ಸಾಧ್ಯವಾಗಿಲ್ಲ.

ಗಾಂಧಿ ವಿಫಲರಾದದ್ದು ಏಕೆ?

ಅಸ್ಪೃಶ್ಯರ ಕಾರಣಕ್ಕಾಗಿ ಹೋರಾಡಿದ್ದಕ್ಕಾಗಿ ಜಗಜೀವನರಾಮ್ ಅವರು ಮಹಾತ್ಮಾಗಾಂಧಿಯವರಿಗೆ ಅಭಿನಂದನೆ ಸಲ್ಲಿಸುತ್ತಾರೆ. ಅಸ್ಪೃಶ್ಯತೆ ಮತ್ತು ಜಾತಿಯ ಪ್ರಶ್ನೆಗಳಿಗೆ ಮಹಾತ್ಮರು ಹೇಗೆ ಸತ್ಯ ಮತ್ತು ಅಹಿಂಸೆಯನ್ನು ಅನ್ವಯಿಸಿದರೆಂದು ಅವರು ತೋರಿಸಿಕೊಡುತ್ತಾರೆ. "ನಾವು ಅಸ್ಪೃಶ್ಯತೆಯನ್ನು ನಿವಾರಿಸದಿದ್ದರೆ ತಾವೇ ನಾಶವಾಗುತ್ತೇವೆ... ನಾಲ್ಕು ವರ್ಣಗಳು ಮೂಲಭೂತವಾದವು, ಸಹಜವಾದುವು, ಅಗತ್ಯವಾದವು. ಆದರೆ ಅಸಂಖ್ಯಾತ ಜಾತಿ ಮತ್ತು ಉಪಜಾತಿಗಳು ಅನಗತ್ಯವಾದುವು......ವರ್ಣಗಳು ಮಾನವ ಶಕ್ತಿಯ ವಿತರಣೆಯ ನಿಸರ್ಗ ನಿಯಮವನ್ನು ಮತ್ತು ನಿಜವಾದ ಆರ್ಥಿಕತೆಯನ್ನು ಪೂರೈಸುತ್ತವೆ......ಅವು ಸಾಮಾಜಿಕ ಸ್ಥಿರತೆ ಮತ್ತು ಪ್ರಗತಿಯ ಅತ್ಯಂತ ಸಾಧುವಾದ ಹೊಂದಾಣಿಕೆ". ಎಂಬ ಗಾಂಧಿಯವರ ವರ್ಣ ಮತ್ತು ಜಾತಿಯ ವೈಭವೀಕರಣವನ್ನು ಜಗಜೀವನರಾಮ್ ಉಲ್ಲೇಖಿಸುತ್ತಾರೆ. ಅಸಮಾನತೆಯನ್ನು ನಿಸರ್ಗದ ನಿರಂತರ ನಿಯಮವೆಂದು ಹೇಳುವ ಗಾಂಧಿಯವರು ಜಾತಿಪದ್ಧತಿಯ ಅಭಿಪ್ರಾಯಗಳನ್ನು ಅಲುಗಾಡಿಸಿದರು ಎಂದು ಜಗಜೀವನರಾಮ್ ಹೇಗೆ ಹೇಳುತ್ತಾರೆ?

'ಜಾತಿ' ಹೋಗಬೇಕೆಂದು ಗಾಂಧಿಯವರು ಕೊನೆಗೆ ತೀರ್ಮಾನಿಸಿದರೆಂದು ಜಗಜೀವನರಾಮ್ ನಮಗೆ ಭರವಸೆ ಕೊಡುತ್ತಾರೆ. ತಮ್ಮ ಮಹಾನ್‌ಗುರು ವಿಫಲವಾದದ್ದು ಏಕೆ ಎಂದು ಅವರು ಪ್ರಶ್ನಿಸಿಕೊಳ್ಳುವುದಿಲ್ಲ. ಸಮಕಾಲೀನ ರಾಷ್ಟ್ರೀಯ ಅಭಿಪ್ರಾಯಕ್ಕಿಂತ ಗಾಂಧಿ ಬಹಳಷ್ಟು ಮುಂದೆ ಇದ್ದರು ಮತ್ತು ಇಪ್ಪತ್ತರ ದಶಕದಲ್ಲೇ ಅಸ್ಪೃಶ್ಯತೆಯ ಪ್ರಶ್ನೆ ಎತ್ತುವ ಧೈರ್ಯ ತೋರಿಸಿದರು. ಅವನ್ನು ಸ್ವಾತಂತ್ರ್ಯ ಸಂಗ್ರಾಮದ ಜೊತೆ ಸಂಬಂಧ ಕಲ್ಪಿಸಿದರು. ಆದರೆ ಗಾಂಧಿಯವರಿಗೆ ಇದೊಂದು ನೈತಿಕ ಪ್ರಶ್ನೆ ಮಾತ್ರ ಆಗಿತ್ತು. ಹಿಂದೂ ಸಾಮಾಜಿಕ ಸುಧಾರಣೆಯ ಪ್ರಶ್ನೆ ಆಗಿತ್ತು. ಅಸ್ಪೃಶ್ಯರು ಜೀವಿಸುತ್ತಿರುವ ಆರ್ಥಿಕ ಸ್ಥಿತಿಗತಿಗಳು ಮತ್ತು ಜೀತಗಾರಿಕೆಯನ್ನು ನಾಶಪಡಿಸಿದರೆ ಮಾತ್ರ ಅಸ್ಪೃಶ್ಯತೆ ನಾಶವಾಗುತ್ತದೆ. ಕೃಷಿಯ ಊಳಿಗಮಾನ್ಯ ಸಂಬಂಧಗಳ ನಾಶ ಆಗಬೇಕು. ಆದರೆ ಜಗಜೀವನರಾಮರ ಕಾಂಗ್ರೆಸ್ ಅಗಲಿ ಮಹಾತ್ಮಾ ಅವರಾಗಲಿ ಇದಕ್ಕೆ ತಯಾರಿರಲಿಲ್ಲ.

ಅಸ್ಪೃಶ್ಯರ ಹಣೆಬರಹವನ್ನು ಸ್ಥಿರಗೊಳಿಸಿ ಅವರ ಮೇಲೆ ಕಷ್ಟಗಳ ಹೊರೆಹೊರಿಸಿರುವ ಕಾಂಗ್ರೆಸ್ ಪಕ್ಷದ ನೀತಿಗಳ ಬಗ್ಗೆ ಈ ಪುಸ್ತಕ ಚಕಾರ ಎತ್ತುವುದಿಲ್ಲ. ಜಗಜೀವನರಾಮ್ ಅವರ ಕಷ್ಟಗಳನ್ನು ಅದ್ಭುತವಾಗಿ ಎತ್ತಿತೋರಿಸುತ್ತಾರೆ. ಆದರೆ ಅದಕ್ಕೆ ಮೂಕಪ್ರೇಕ್ಷಕರಾಗಿ ನಾವು ಯಾಕೆ ಇದದ್ದು ಎಂಬುದಕ್ಕೆ ಯಾವ ವಿವರಣೆಯನ್ನೂ ನೀಡುವುದಿಲ್ಲ. ಅದಕ್ಕೆ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳುವುದಿಲ್ಲ.

ಜನತಾಪಕ್ಷದೊಡನೆ ಅವರಿಗಿದ್ದ ಎರಡೂವರೆ ವರ್ಷದ ಸಂಬಂಧವೂ ಹರಿಜನರ ಮೇಲಿನ ಆಕ್ರಮಣಗಳನ್ನು ಕಡಿಮೆ ಮಾಡಲಿಲ್ಲ.

ಹರಿಜನರು ಇಂದು ಎದುರಿಸುತ್ತಿರುವ ಸಮಸ್ಯೆಗಳ ಚಿತ್ರಣವು, ಹರಿಜನರಿಗಾಗಿ ತಾವು ಮಾಡಿರುವ ಸೇವೆಯ ಬಗ್ಗೆ ಕಾಂಗ್ರೆಸ್ ಕೊಚ್ಚಿಕೊಳ್ಳುವ ಬಡಾಯಿಗೆ ಒಳ್ಳೆಯ ಕನ್ನಡಿಯಾಗಿದೆ.

ಮೀಸಲಾತಿಯ ಪರಿಣಾಮ

ಈಗ ಹರಿಜನರಿಗಾಗಿ ಇರುವ ಮೀಸಲಾತಿಯು ತುಂಬ ಅಸಮರ್ಪಕ ಎಂದು ಜಗಜೀವನರಾಮ್ ಹೇಳುತ್ತಾರೆ ಸೇವೆಗೆ ಸೇರಿರುವ ಹರಿಜನರು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಬೇಕಾಗಿದೆ. ಮೇಲ್ವಿಚಾರಕರು ಸಹೋದ್ಯೋಗಿಗಳ ಅಸಹಕಾರ ಅವರಿಗಿರುತ್ತದೆ ಎಂದು ಅವರು ವಿವರಿಸುತ್ತಾರೆ. ಬರಿಯ ಮೀಸಲಾತಿಯಿಂದ ಅಸ್ಪೃಶ್ಯರ ಸ್ಥಾನಮಾನವನ್ನು ಸುಧಾರಿಸಲು ಸಾಧ್ಯವಿಲ್ಲ ಎಂಬುದನ್ನು ಇವೆಲ್ಲ ತೋರಿಸುತ್ತವೆ.

ಮೀಸಲಾತಿಯನ್ನು ಯಾರೂ ವಿರೋಧಿಸುವುದಿಲ್ಲ. ಆದರೆ ಅದರ ಪರಿಣಾಮವನ್ನು ಮಾತ್ರ ಸರಿಯಾಗಿ ವಿಶ್ಲೇಷಿಸಬೇಕು. ಆ ಜನಾಂಗದ ಕೆಲವು ವ್ಯಕ್ತಿಗಳಿಗೆ ಅದು ಸಹಾಯ ಮಾಡಬಹುದು. ಆದರೆ ಹಳ್ಳಿಗಳಲ್ಲಿ ಜೀತದಾಳಾಗಿ ಜೀವಿಸುತ್ತಿರುವ ಅಗಾಧ ಹರಿಜನ ಸಮೂಹಕ್ಕೆ ಅವರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದಲೇ ಕೆಲಸ ಮತ್ತು ಉನ್ನತ ಹುದ್ದೆಗಳನ್ನು ಪಡೆಯುವವರು ಭರ್ತ್ಸನೆಯನ್ನು ಎದುರಿಸಬೇಕಾಗುತ್ತದೆ.

ಇನ್ನಷ್ಟು ಸಣ್ಣಪುಟ್ಟ ಸವಲತ್ತುಗಳನ್ನು ಪಡೆಯಲು ಹರಿಜನರ ಸಣ್ಣ ಸಮೂಹವೊಂದು ಸರ್ವಾಧಿಕಾರಿ ಪಕ್ಷವನ್ನು ಬೆಂಬಲಿಸಲು ಆರಂಭಿಸುತ್ತಿದೆ. ಕಾಂಗೈಗೆ ಬೆಂಬಲ ನೀಡುವಂತೆ ಮತ್ತು ವಾಮ ಪಕ್ಷಗಳ ಕಡೆಗೆ ವಾಲದಂತೆ ಹರಿಜನರು ಅನೇಕ ನಾಯಕರು ಸಂಘಟಿಸುತ್ತಿದ್ದಾರೆ. ವಿಪರ್ಯಾಸ ಎಂದರೆ ದೊಡ್ಡ ಭೂಮಾಲೀಕರು ಮತ್ತು ಭೂರ್ಜ್ವಾವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ಕಾಂಗೈಗೆ, ಭಾರತದ ಸಮಾಜದಲ್ಲಿ ಅತ್ಯಂತ ತುಳಿತಕ್ಕೆ ಒಳಗಾದವರು ಮತಹಾಕುತ್ತಾರೆ.

ಸಾರ್ವತ್ರಿಕ ಹೋರಾಟ

ಆರ್ಥಿಕ ಶೋಷಣೆಯ ವಿರುದ್ಧ ನಡೆಯುವ ಸಾರ್ವತ್ರಿಕ ಹೋರಾಟದಲ್ಲಿ ಈ ತುಳಿತಕ್ಕೊಳಗಾದ ವರ್ಗದ ಪಾಲು ತೀರ ಕಡಿಮೆ ಎನ್ನುವುದು ನಿಜ. ರೈತ-ಕಾರ್ಮಿಕರ ಹೋರಾಟದಲ್ಲಿ, ನೌಕರರ ಹೋರಾಟವಲ್ಲಿ, ಕಾರ್ಮಿಕರ ಹೋರಾಟದಲ್ಲಿ ಅವರು ಭಾಗವಹಿಸುವುದು ಕಡಿಮೆ.

ಇಂಥ ಹೋರಾಟಗಳಲ್ಲಿ ಭಾಗವಹಿಸುವುದು ಎಂದರೆ ಎಡ ಪಕ್ಷಗಳ ಜೊತೆ ಸಹಕರಿಸಬೇಕಾಗುತ್ತದೆ. ಅವರ ರೈತ ಮತ್ತು ಕಾರ್ಮಿಕ ಸಂಘಟನೆಗಳ ಜೊತೆ ಸೇರಬೇಕಾಗುತ್ತದೆ, ಕೆಲವು ನಾಯಕರು ಹರಿಜನರಲ್ಲಿ ಕಮ್ಯುನಿಸ್ಟ್ ವಿರೋಧಿ ಭಾವನೆಗಳನ್ನು ತುಂಬುತ್ತಿದ್ದಾರೆ. ಸಾರ್ವತ್ರಿಕ ಹೋರಾಟದೊಳಗೆ ಅವರು ಸೇರದಂತೆ ತಡೆಯುತ್ತಿದ್ದಾರೆ. ಜಗಜೀವನರಾಂ ಅವರು ಕೂಡ ವರ್ಗಹೋರಾಟವನ್ನು ಅದರ ಸಾಂಪ್ರದಾಯಿಕ ಅರ್ಥದಲ್ಲಿ ಬಳಸುವುದನ್ನು ನಾನು ಹೇಳುವುದಿಲ್ಲ ಎನ್ನುತ್ತಾರೆ. ವರ್ಗ ಹೋರಾಟ ಬೇಡ, ಸರ್ಕಾರದ ನೀತಿಗಳಲ್ಲಿ ನಂಬಿಕೆ ಇಡಿ, ಅವನ್ನು ಅನುಷ್ಠಾನಗೊಳಿಸುವುದಕ್ಕೆ ಸಾಮೂಹಿಕ ಕ್ರಿಯೆ ಇರಲಿ-ಇಲ್ಲಿಗೆ ಜಗತ್ತಿನಲ್ಲಿ ಕ್ರಾಂತಿ ಮುಗಿದು ಹೋಗುತ್ತದೆ.

ಭೂವಿತರಣೆಯ ಬಗ್ಗೆ ಹೇಳುವಾಗ, ಬೇಸಾಯರ್ಹವಾದ ಪಾಳು ಭೂಮಿಯನ್ನೇ ಜಗಜೀವನರಾಂ ಅವರು ವಿತರಣೆಗೆ ದೊಡ್ಡ ಮೂಲವನ್ನಾಗಿ ಪರಿಗಣಿಸುತ್ತಾರೆ. ಭೂಮಿತಿ, ಪ್ರಮುಖ ಮೂಲ ಅಲ್ಲವಂತೆ, ಆದರೆ ಇದು ತೀರ ಸುಳ್ಳು. ಭೂಮಿತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಿದರೆ 35 ಮಿಲಿಯನ್ ಎಕರೆ ಸಿಗುತ್ತದೆ. ಭೂಮಿತಿಯ ಪ್ರಾಮುಖ್ಯವನ್ನು ರಾಮ್ ಅವರು ಕೆಳಗಿಳಿಸುತ್ತಿರುವುದೇಕೆ? ವರ್ಗಹೋರಾಟವನ್ನು ತಪ್ಪಿಸುವುದಕ್ಕಾಗಿಯೆ?

ಹಿಂದೂಗಳಲ್ಲಿ ಮಾನಸಿಕ ಕ್ರಾಂತಿ ಆಗಬೇಕೆಂದು ರಾಮ್ ತಮ್ಮ ಪುಸ್ತಕದಲ್ಲಿ ಪದೇ ಪದೇ ಹೇಳುತ್ತಾರೆ. ಅಸ್ಪೃಶ್ಯತೆಯ ವಿರುದ್ಧ ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿ ಚಳುವಳಿಗಳು ಪ್ರಚಾರ ನಡೆಸಿದ ಹೊರತು ಪ್ರಗತಿ ಸಾಧ್ಯವಿಲ್ಲ. ಜನತೆ ಇದುವರೆಗೆ ನಡೆಸಿದ ಹೋರಾಟಗಳು ಈ ದಿಕ್ಕಿನಲ್ಲಿ ಕಡಿಮೆ ಫಲವನ್ನು ಕೊಟ್ಟಿರುವುದಕ್ಕೆ ಕಾರಣ ಅಂಥ ಸೈದ್ಧಾಂತಿಕ ಪ್ರಚಾರ ಅವರ ಜೊತೆಗಿಲ್ಲದಿರುವುದೇ.

ಜಗಜೀವರಾಂ ಅವರು ಕೊಟ್ಟಿರುವ ಹರಿಜನರ ಸ್ಥಿತಿಗತಿಗಳ ಚಿತ್ರಣ, ನಮ್ಮ ಜನರಲ್ಲಿ ನಾಚಿಕೆ ಹುಟ್ಟಿಸಬೇಕು. ಇತರ ಹರಿಜನ ನಾಯಕರಿಗಿಂತ ಭಿನ್ನವಾಗಿ ರಾಮ್ ಅವರು, ಅಸ್ಪೃಶ್ಯರ ಹೋರಾಟವು, ಭಾರತದ ಇತರ ಶೋಷಿತ ವರ್ಗಗಳ ಹೋರಾಟದ ಒಂದು ಭಾಗ ಎಂಬುದನ್ನು ಒತ್ತಿ ಹೇಳುತ್ತಾರೆ. ಆದರೆ ಈ ತಿಳುವಳಿಕೆಯನ್ನು ಅವರು ಸ್ಥಿರವಾಗಿ ಪ್ರತಿಪಾದಿಸುವುದಿಲ್ಲ. ಅವರ ಕಾರ್ಯಕ್ರಮವನ್ನು ಸೂಚಿಸುವಾಗ ಅವರು ಬೂರ್ಜ್ವಾ-ಭೂಮಾಲೀಕ ಆಡಳಿತ, ಸರ್ವಾಧಿಕಾರ ಇವುಗಳ ವಿರುದ್ಧದ ಹೋರಾಟವನ್ನು ಮರೆಯುತ್ತಾರೆ. ಸರ್ಕಾರಿ ನೀತಿಗಳನ್ನು ಅನುಷ್ಠಾನಗೊಳಿಸಬೇಕು ಎನ್ನುತ್ತಾರೆ. ಈಗಿರುವ ವರ್ಗ ಚೌಕಟ್ಟಿನಲ್ಲಿ, ಅಸ್ಪೃಶ್ಯರ ಸ್ಥಿತಿ ಸುಧಾರಿಸಬಹುದು ಎಂಬ ಭ್ರಮೆಗೆ ಜೋತು ಬೀಳುತ್ತಾರೆ. ನಾಲ್ಕು ದಶಕಗಳ ಕಾಂಗ್ರೆಸ್ ಒಡನಾಟ, ಅವರು ವಿಮೋಚನೆಯ ನಿಜವಾದ ಹೋರಾಟದ ದಾರಿಗೆ ಹೋಗದಂತೆ ತಡೆದಿದೆ.

ಎಚ್. ಎಸ್. ಸಿ. ಎಲ್. ಕಾರ್ಮಿಕರ ಯಶಸ್ವೀ ಮುಷ್ಕರ

ಕೇಂದ್ರ ಸರ್ಕಾರದ ಅಧೀನದಲ್ಲಿರುವ ಹಿಂದೂಸ್ತಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ ಲಿಮಿಟೆಡ್‌ನ ಘಟಕವಾದ ಕುದುರೆಮುಖದಲ್ಲಿ 24-9-80ರಂದು 239 ಖಾಯಂ ಕೆಲಸಗಾರರನ್ನು ಆಡಳಿತವರ್ಗ ಕೆಲಸದಿಂದ ವಜಾ ಮಾಡಿತ್ತು. ಈ ನ್ಯಾಯಬಾಹಿರ ಕ್ರಮವನ್ನು ಪ್ರತಿಭಟಿಸಿ ಕುದುರೆಮುಖದ ಆಡಳಿತವರ್ಗದ ಆಫೀಸೆದುರು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಯುತ್ತಿತ್ತು.

ವಜಾ ಆದ ಕಾರ್ಮಿಕರು ಕಲಕತ್ತೆಯಲ್ಲಿ ಎಚ್. ಎಸ್. ಸಿ. ಎಲ್.ನ ಮುಖ್ಯ ಕಚೇರಿ ಎದುರು ಧರಣಿ ನಡೆಸಿದ್ದಲ್ಲದೇ ದೇಶಾದ್ಯಂತ ಇರುವ ಎಚ್. ಎಸ್. ಸಿ. ಎಲ್. ಘಟಕಗಳಿಗೆ ತೆರಳಿ ರಿಟ್ರೆಂಚ್‌ಮೆಂಟ್ ವಿರುದ್ಧ ಕುದುರೆಮುಖದಲ್ಲಿ ನಡೆಯುತ್ತಿರುವ ವಿರೋಚಿತ ಹೋರಾಟದ ಬಗ್ಗೆ ವಿವರಣೆಕೊಟ್ಟು ಬಂದರು.

15-1-81ರಂದು, ಕಲಕತ್ತೆಯಲ್ಲಿ ಅಖಿಲಭಾರತ ಎಚ್.ಎಸ್.ಸಿ.ಎಲ್ ಯೂನಿಯನ್‌ಗಳ ಸಂಯುಕ್ತ ಸಭೆ ಸೇರಿತ್ತು. ಸಭೆಯ ಅಧ್ಯಕ್ಷತೆಯನ್ನು ಅಖಿಲಭಾರತ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ಎಂ. ಕೆ. ಪಂಧೆ ವಹಿಸಿದ್ದರು. ಕುದುರೆಮುಖದಲ್ಲಿ ನಡೆಯುತ್ತಿರುವ ಹೋರಾಟದ ಬೆಂಬಲಾರ್ಥವಾಗಿ 19-2-81ರಂದು ಅಖಿಲ ಭಾರತ ಎಚ್. ಎಸ್. ಸಿ. ಎಲ್. ಕಾರ್ಮಿಕರ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಡಲಾಗಿತ್ತು.

ಕೋ-ಆರ್ಡಿನೇಷನ್ ಕಮಿಟಿಯ ತೀರ್ಮಾನದ ಪ್ರಕಾರ 19-2-81ರಂದು ದೇಶಾದ್ಯಂತ ಮುಷ್ಕರ ಯಶಸ್ವೀಯಾಗಿ ನಡೆಯಿತು. ಹೋರಾಟ ಮುಂದುವರೆದಿದ್ದು ಸಾರ್ವಜನಿಕರು ಬೆಂಬಲವೀಯಬೇಕೆಂದು ಕಾರ್ಮಿಕರ ಪರವಾಗಿ ಕಾಂ. ರಾಮದಾಸ್ ಆಚಾರ್ಯ ವಿನಂತಿಸಿಕೊಂಡಿದ್ದಾರೆ.

ಆರ್ಥಿಕ ಸಮೀಕ್ಷೆ :

ಕಪ್ಪು ಹಣಕ್ಕೆ ಬಿಳಿ ಬಾಂಡ್!

ಆರ್. ಚಂದ್ರ

ನಮ್ಮ ದೇಶದಲ್ಲಿ ತೆರಿಗೆ ತಪ್ಪಿಸಿದ, ಸರ್ಕಾರದ ಲೆಕ್ಕಕ್ಕೆ ಸಿಗದ, ಅಕ್ರಮವಾಗಿ ಗಳಿಸಿದ ಆದಾಯ ಹಾಗೂ ಸಂಪತ್ತು - ಅಂದರೆ ಕಪ್ಪು ಹಣದ ಮೊತ್ತವು 1950ರಲ್ಲಿ ರೂ. 200 ಕೋಟಿಯಷ್ಟಾಗಿತ್ತು ಎಂದು ಭಾರತಕ್ಕೆ ಬಂದ ನಿಕೊಲಸ್ ಕಾಲ್ಡರ್ ಎಂಬ ಪ್ರಸಿದ್ಧ ಆಂಗ್ಲ ಅರ್ಥಶಾಸ್ತ್ರಜ್ಞರು ಅಂದಾಜು ಮಾಡಿದ್ದರು. 1971ರಲ್ಲಿ ಪ್ರತ್ಯಕ್ಷ ತೆರಿಗಳ ಕುರಿತು ಅಧ್ಯಯನ ನಡೆಸಿದ ವಾಂಛೂ ಸಮಿತಿಯು ದೇಶದಲ್ಲಿ ರೂ. 1400 ಕೋಟಿಯಷ್ಟು ಕಪ್ಪು ಹಣವಿದೆ ಎಂದು ವರದಿ ಮಾಡಿತ್ತು. 1978ರಲ್ಲಿ ಕೇಂದ್ರ ಅರ್ಥಖಾತೆಯ ಮಂತ್ರಿ ಶ್ರೀ ಸತೀಸ್ ಅಗರವಾಲರು ದೇಶದಲ್ಲಿ ರೂ. 20.000 ಕೋಟಿಗೂ ಹೆಚ್ಚು ಕಪ್ಪು ಹಣದ ಕೂಡಿಕೆ ಇರುವುದೆಂದು ತಿಳಿಸಿದ್ದರು. 1981ರಲ್ಲಿ ಕಪ್ಪು ಹಣದ ಮೊತ್ತವು ರೂ. 25,000 ಕೋಟಿಯಿಂದ ರೂ. 30,000 ಕೋಟಿಯಷ್ಟಾಗಿದ್ದು, ಒಟ್ಟು ರಾಷ್ಟ್ರೀಯ ಉತ್ಪನ್ನದ (UNP) ಶೇ. 25ರಷ್ಟಾಗಿದೆಯಂತೆ! ಕಪ್ಪು ಹಣದ ಆದಾಯ ಮತ್ತು ಸಂಪತ್ತು ದೇಶದಲ್ಲಿ ಒಂದು ಸಮನಾಂತರ ಆರ್ಥಿಕ ವ್ಯವಸ್ಥೆಯನ್ನುಂಟುಮಾಡಿದೆ. ಕಪ್ಪು ಹಣವನ್ನು ಚುನಾವಣೆಗಳಲ್ಲಿ, ಪಕ್ಷಾಂತರಗೊಳಿರುವಲ್ಲಿ, ಸರ್ಕಾರ ಹಾಗೂ ಅಧಿಕಾರಿಗಳನ್ನು ಚಲಿಸುವಲ್ಲಿ, ಸುಖೋಪಭೋಗಗಳಲ್ಲಿ ಧಾರಾಳವಾಗಿ ಬಳಸಲಾಗುತ್ತದೆ. ಕಪ್ಪುಹಣ ದೇಶದ ಆರ್ಥಿಕ ವ್ಯವಸ್ಥೆಯನ್ನು ಹದಗೆಡಸಿ, ನೀತಿ ನಿಯಮಗಳನ್ನು ಉಲ್ಲಂಘಿಸಿ, ಅನ್ಯಾಯ ಅತ್ಯಾಚಾರಗಳನ್ನು ಹೆಚ್ಚಿಸುತ್ತಿದೆ. ಕಪ್ಪು ಹಣವಂತರನ್ನು ಬಯಲಿಗೆಳೆದು ಶಿಕ್ಷಿಸಿ, ಅವರ ಆದಾಯ ಸಂಪತ್ತುಗಳಿಗೆ ಮುಟ್ಟುಗೋಲು ಹಾಕುವ ಬದಲು, ಇಂದಿರಾ ಘನ ಸರ್ಕಾರ ಕಪ್ಪು ಹಣಕ್ಕೆ ಬಿಳಿ ಬಾಂಡ್ ಕೊಡಿಸುವ ರಾಷ್ಟ್ರಾಧ್ಯಕ್ಷರ ಒಂದು ಆಧ್ಯಾದೇಶ ಹೊರಡಿಸಿದೆ! ಇದರ ಉದ್ದೇಶವೇನು?

ಆಧ್ಯಾದೇಶ :

ದೇಶದಲ್ಲಿ ಕಪ್ಪುಹಣವು ತಾಂಡವವಾಡುತ್ತಿರುವಾಗ, ಇದ್ದಕ್ಕಿದ್ದಂತೆ ತಾ॥ 12-1-81ರಂದು ಹೊರಡಿಸಿದ ರಾಷ್ಟ್ರಾಧ್ಯಕ್ಷರ ಆಧ್ಯಾದೇಶವು ಕಪ್ಪು ಹಣಕ್ಕೆ ಬದಲಾಗಿ ಬೇರರ್ ಬಾಂಡುಗಳನ್ನು ನೀಡಲಾಗುವುದೆಂದು ಪ್ರಕಟಿಸಿತು. ತಾ॥ 2-2-81 ರಿಂದ ತಾ॥ 30-3-81ರ ವರೆಗೆ ಈ ಬಾಂಡುಗಳನ್ನು ರಿಸರ್ವ ಬ್ಯಾಂಕ್, ಸ್ಟೇಟ್ ಬ್ಯಾಂಕ್, ರಾಷ್ಟ್ರೀಕೃತ ಬ್ಯಾಂಕ್ ಇವುಗಳ ಕಚೇರಿಗಳಲ್ಲಿ ಕೊಡಲಾಗುವುದು. ಪ್ರತಿ ಬಾಂಡು ರೂ. 1000 ಮೌಲ್ಯ ಉಳ್ಳದ್ದು. ಹತ್ತುವರ್ಷಗಳ ಅವಧಿ ಮುಗಿದ ಮೇಲೆ ಈ ಬಾಂಡುಗಳಿಗೆ ಶೇ. 2ರಷ್ಟು ಬಡ್ಡಿ ಕೊಡಿಸಿ ರೂ. 12,000 ನಗದಾಗಿ ಮರಳಿ ಕೊಡಲಾಗುವುದು. ಬಾಂಡುಗಳನ್ನು ಪಡೆಯಲು ಕಪ್ಪುಹಣ ತಂದವರ ಪೂರ್ವಾಪರ ವಿಚಾರ ಮಾಡುವಂತಿಲ್ಲ. ಅವರು ಹಣ ಎಲ್ಲಿಂದ ತಂದರು, ಹೇಗೆ ಸಂಪಾದಿಸಿದರು, ಇದು ತನಕ ಸರ್ಕಾರಕ್ಕೆ ತಿಳಿಸದೆ ಏಕೆ ಬಚ್ಚಿಟ್ಟುಕೊಂಡಿದ್ದರು ಎಂದು ಪ್ರಶ್ನಿಸುವಂತಿಲ್ಲ. ಬೇರರ್ ಬಂಡು ಪಡೆಯಲು ಬಳಸಿದ ಕಪ್ಪು ಹಣದ ಮೇಲೆ ಆದಾಯ ತೆರಿಗೆ ಹಾಗೂ ಸಂಪತ್ತು ತೆರಿಗೆ ವಿಧಿಸಲಾಗುವುದಿಲ್ಲ. ಬಾಂಡುಗಳ ಮೇಲಿನ ಬಡ್ಡಿಗೂ ಆದಾಯ ಸಂಪತ್ತನ್ನು ಹೊರ ಹಾಕಲಿ ಎಂದು. ರೂ. 1000 ಕೋಟಿಯಿಂದ ರೂ. 2000 ಕೋಟಿಯಷ್ಟಾದರೂ ಕಪ್ಪು ಹಣ ಬೆಳಕಿಗೆ ಬಂದು ರಾಷ್ಟ್ರದ ಅಭಿವೃದ್ಧಿ ಯೋಜನೆಗೆ ಮುಂದಿನ ಹತ್ತು ವರ್ಷಗಳಲ್ಲಿ ಬಳಸುವಂತಾಗಲಿ ಎಂದು ಸರ್ಕಾರದ ಉದ್ದೇಶ,

ಯಾರಿಗೆ ಲಾಭ ?

ಹೆಚ್ಚಿನ ಕಪ್ಪುಹಣ ಚಿನ್ನ, ಬೆಳ್ಳಿ, ವಜ್ರ, ಮುತ್ತು ರತ್ನಗಳ ರೂಪದಲ್ಲಿಯೂ, ಬೆಲೆ ಬಾಳುವ ಇಲೆಕ್ಟ್ರಾನಿಕ್ ಗೆಜಟ್‌ಗಳಲ್ಲಿಯೂ, ಕಟ್ಟಡ, ಸ್ಥಿರ ಆಸ್ತಿ, ಸಿನೇಮಾಗಳಲ್ಲಿಯೂ, ಜೀವನಾವಶ್ಯಕ ವಸ್ತುಗಳ ಅಕ್ರಮ ದಾಸ್ತಾನುಗಳಲ್ಲಿಯೂ ಇದೆ. ನಗದು ಕಪ್ಪು ಹಣ ಶೇ. 25ರಷ್ಟು ಕೂಡಾ ಇರಲಾರದು ಎಂದು ತಿಳಿದು ಬಂದಿದೆ. (ರೂ. 5-6 ಸಾವಿರ ಕೋಟಿ) ನಗದು ಕಪ್ಪು ಹಣವನ್ನು ಕಾಳಸಂತೆ ವ್ಯಾಪಾರಕ್ಕೆ, ಅಕ್ರಮ ಅವ್ಯವಹಾರಗಳಿಗೆ ಬಳಸಲಾಗುವುದು. ಬಡ್ಡಿ ವ್ಯಾಪಾರಸ್ಥರು. ಕೈಗಾರಿಕೋದ್ಯಮಿಗಳು, ಇತರ ವಾಪ್ಯಾರಕೋದ್ಯಮಿಗಳು ಈ ರೀತಿ ಕಪ್ಪು ಹಣ ಬಳಸುತ್ತಾರೆ. ಅವರು ತಮ್ಮ ವ್ಯವಹಾರ ಬಿಟ್ಟು ಬೇರರ್ ಬಾಂಡಿನಲ್ಲಿ ಹಣ ತೊಡಗಿಸಲು ಮುಂದೆ ಬರಲಾರರು. ಇನ್ನು ಕಪ್ಪು ಹಣ ನಗದಾಗಿ ಇರುವವರು, ರಾಜಕೀಯ ಪಕ್ಷಗಳು, ರಾಜಕೀಯ ಪುಢಾರಿಗಳು, ಮಂತ್ರಿಗಳು ಸರ್ಕಾರಿ ಹಾಗೂ ಸರ್ಕಾರೇತರ ಉನ್ನತ ಅಧಿಕಾರಿಗಳು. ಇವರು ಹೊಸ ಆಧ್ಯಾದೇಶದ ಲಾಭ ಪಡೆದು ತಮ್ಮ ಕಪ್ಪು ಹಣವನ್ನು ಬೇರರ್ ಬಾಂಡುಗಳಲ್ಲಿ ತೊಡಗಿಸಿ ಬಿಳಿ ಹಣವನ್ನಾಗಿ ಪರಿವರ್ತಿಸಿಕೊಳ್ಳುವರು. ಇತ್ತೀಚಿಗಿನ 5-6 ವರ್ಷಗಳಲ್ಲಿ ಇವರು ಗಳಿಸಿದ ಕಪ್ಪು ಹಣ ಸಾವಿರಾರು ಕೋಟಿಯಷ್ಟಾಗಿರಬಹುದು!

ಸರಕಾರದ ವೈಫಲ್ಯ :

ಸ್ವಾತಂತ್ರ್ಯೋತ್ತರದಲ್ಲಿ ಆರ್ಥಿಕ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಂದಿನಿಂದ ಕಾಂಗ್ರೆಸ್ ಆಳ್ವಿಕೆಯಲ್ಲಿ ಕಪ್ಪು ಹಣದ ಹಾವಳಿ ಹೆಚ್ಚುತ್ತಲೇ ಬಂದಿದೆ. ಅದನ್ನು ತಡೆಗಟ್ಟಲು 1951ರಲ್ಲಿ, 1961ರಲ್ಲಿ, 1975ರಲ್ಲಿ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಪರಿಣಾಮಕಾರಿ ಪ್ರಯೋಜನ ಆಗಲಿಲ್ಲ. 1977-79ರಲ್ಲಿ ಇಂದಿರಾಗಾಂಧಿಯ ನಿವಾಸದಲ್ಲಿ 8-10 ಉಕ್ಕಿನ ಕಪಾಟುಗಳಲ್ಲಿ ನೂರಾರು ಕೋಟಿ ಕಪ್ಪುಹಣ ಹಾಗೂ ಸಂಪತ್ತುಗಳನ್ನು ಹುಗಿದಿಟ್ಟಿರುವುದು ಜನತಾ ಸರ್ಕಾರಕ್ಕೆ ತಿಳಿದಿದ್ದರೂ ಅದನ್ನು ಬಯಲಿಗೆಳೆಯಲು ವಿಫಲವಾಯಿತು. ಹಾಗೆಯೇ ವಿದೇಶಗಳಲ್ಲಿ ಬಚ್ಚಿಟ್ಟ ಕಪ್ಪು ಹಣವನ್ನು ಪತ್ತೆ ಹಚ್ಚಿ ಅದನ್ನು ಮುಟ್ಟುಗೋಲು ಹಾಕುವುದಕ್ಕೂ ವಿಫಲವಾಯಿತು. ಇದು ಕಪ್ಪುಹಣದ ಸಾಮ್ರಾಜ್ಯ ಅತ್ಯಂತ ಪ್ರಭಲವಾಗಿದೆ. ಸರ್ಕಾರ ಉಳಿಯುವುದು ಅಳಿಯುವುದು, ಚುನಾವಣೆ ಗೆಲ್ಲುವುದು ಸೋಲುವುದು, ಒಂದು ಉದ್ಯಮ ಸೋಲುವುದು ಗೆಲ್ಲುವುದು ಕಪ್ಪು ಹಣದ ಕೈಯಲ್ಲಿದೆ!

ಇದು ತನಕ ಕಪ್ಪು ಹಣ ಬಯಲಿಗೆಳೆಯುವ ಕಾರ್ಯಕ್ರಮಗಳನ್ನು ಅರ್ಥ ಖಾತೆಯ ತಜ್ಞರೊಡನೆಯೂ ಯೋಜನಾ ಆಯೋಗದ ಸದಸ್ಯರೊಡನೆಯೂ ವಿಚಾರ ವಿನಿಮಯ ಮಾಡಿ ನಿರ್ಧರಿಸಲಾಗುತ್ತಿತ್ತು. ಈ ಸಲದ ಬೇರರ್ ಬಾಂಡ್ ಯೋಜನೆಯನ್ನು ಪೂರ್ವಭಾವಿಯಾಗಿ ಇವರಾರೊಂದಿಗೂ ಚರ್ಚಿಸದೆ ಪ್ರಧಾನಿ ಇಂದಿರಾ ಗಾಂಧಿಯೇ ಏಕಾಏಕಿಯಾಗಿ ಅದನ್ನು ಸೂಚಿಸಿದ್ದರು. ಹೀಗಾಗಿ, ಕೇಂದ್ರ ಮಂತ್ರಿ ಮಂಡಳಿಯ ಸದಸ್ಯರೂ ತುಟಿಪಿಟಿಕ್ ಎನ್ನಲಿಲ್ಲ!

ಆದರೆ, ದೇಶದ ತೆರಿಗೆ ಕೊಡುವ, ಕಾನೂನು ಪಾಲಿಸುವ ಪ್ರಾಮಾಣಿಕ ನಾಗರೀಕರನ್ನು ಶಿಕ್ಷಿಸುವ ಮತ್ತು ತೆರಿಗೆ ತಪ್ಪಿಸುವ, ಕಾನೂನು ಮುರಿಯುವ ಸಮಾಜ ಘಾತುಕ ಹಾಗೂ ಅಪ್ರಾಮಾಣಿಕರನ್ನು ಪ್ರೋತ್ಸಾಹಿಸುವ ಈ ಬೇರರ್ ಬಾಂಡಿನ ಈ ಹೊಸ ಯೋಜನೆಯನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಲಾಗಿದೆ.

ನ್ಯಾಯವಾದಿಗಳು ಏನನ್ನುತ್ತಾರೆ ?

ಸುಪ್ರಸಿದ್ಧ ನ್ಯಾಯವಾದಿಗಳಾದ ಆರ್. ಕೆ. ಗಾರ್ಗ್ ತಮ್ಮ ಹಾಗೂ ಬ್ಲಿಟ್ಸ್ ವಾರಪತ್ರಿಕೆಯ ಸಂಪಾದಕರಾದ ಆರ್. ಕೆ. ಕರಂಜಿಯಾರವರ ಪರವಾಗಿ ಬೇರರ್ ಬಾಂಡ್ ಯೋಜನೆಯ ವಿರುದ್ಧ ತಾ॥ 30-1-81 ರಂದು ಸುಪ್ರೀಂ ಕೋರ್ಟಿನಲ್ಲಿ ವಾದಿಸುತ್ತಾ, ಈ ಆಧ್ಯಾದೇಶವು ಪಕ್ಷಪಾತವಾದದ್ದಾಗಿದೆ ಎಂದೂ ಸಂವಿಧಾನದಲ್ಲಿನ ನಾಗರಿಕರ ಸಮಾನತೆಯ ಮೂಲಭೂತ ಹಕ್ಕಿಗೆ ಚ್ಯುತಿ ಉಂಟುಮಾಡಿದೆ ಎಂದೂ ಅಪಾದಿಸಿದ್ದಾರೆ. ಸರ್ಕಾರಕ್ಕೆ ಇಂತಹ ಆಧ್ಯಾದೇಶ ನೀಡಲು ಹಕ್ಕು ಇಲ್ಲ ಎಂದು ವಾದಿಸಿದರು. ಬೇರರ್ ಬಾಂಡ್ ಖರೀದಿಸಲು ಬರುವ ಕಪ್ಪು ಹಣವಂತರ ಸಂಪೂರ್ಣ ದಾಖಲೆ ಇಡಬೇಕೆಂದೂ, ಅವರ ಆಸ್ತಿ ಆದಾಯಗಳ ಮೇಲೆ ತೆರಿಗೆ ವಿಧಿಸಬೇಕೆಂದೂ, ತೆರಿಗೆ ಕಳ್ಳರನ್ನು ಕಾನೂನಿನಂತೆ ಶಿಕ್ಷಿಸಬೇಕೆಂದೂ ಅವರು ಪ್ರತಿಪಾದಿಸಿದರು.

ಕಪ್ಪುಹಣವನ್ನು ಬೇರರ್ ಬಾಂಡಿನಲ್ಲಿ ತೊಡಗಿಸಿ ಬಿಳಿ ಹಣವನ್ನಾಗಿ ಮಾಡಿ ಚಲಾವಣೆಗೆ ತಂದರೆ 'ಮೂರನೇ ಸಮಾನಾಂತರ ಆರ್ಥಿಕ ವ್ಯವಸ್ಥೆ' ಉಂಟಾಗುವುದೆಂದು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಚಂದ್ರಚೂಡರು ಅಭಿಪ್ರಾಯ ಪಟ್ಟರು. ಬೇರರ್ ಬಾಂಡಿನಲ್ಲಿ ತೊಡಗಿಸಿದ ಕಪ್ಪು ಹಣವನ್ನು 10 ವರ್ಷಗಳ ನಂತರ ಶೇ. 2 ರಷ್ಟು ಬಡ್ಡಿ ಸಹಿತ ನಗದಾಗಿ ಮರು ಪಾವತಿ ಮಾಡುವುದರಿಂದ ಸರ್ಕಾರಕ್ಕೆ ಯಾವ ಲಾಭವೂ ಆಗಲಾರದೆಂದು ಇನ್ನೊಬ್ಬ ನ್ಯಾಯಾಧೀಶರಾದ ಡಿ.ಎ. ದೇಸಾಯಿ ತಿಳಿಸಿದರು. ನ್ಯಾಯಾಧೀಶರಾದ ವಿ. ಡಿ. ತುಳಜಾಪುರ್‌ಕರ್ ಅವರು ಕಪ್ಪು ಹಣವನ್ನು ಬೇರರ್ ಬಾಂಡಿನಲ್ಲಿ ತೊಡಗಿಸಿದ್ದಕ್ಕೆ ಪ್ರೋತ್ಸಾಹವಾಗಿ ಶೇ. 2ರಷ್ಟು ಬಡ್ಡಿ ಕೊಡುವುದನ್ನು ಆಕ್ಷೇಪಿಸಿದರು. ಕಪ್ಪು ಹಣವನ್ನು ಬಿಳಿಯಾಗಿಸುವ ಈ ಯೋಜನೆಯು ಪ್ರಾಮಾಣಿಕ ನಾಕರೀಕರನ್ನು ತೆರಿಗೆ ತೆರುವವರನ್ನು ಹತಾಶಗೊಳಿಸುವುದೆಂದೂ, ತೆರಿಗೆಗಳ್ಳರನ್ನು, ಅಪ್ರಾಮಾಣಿಕ ನಾಗರೀಕರನ್ನು ಪ್ರೋತ್ಸಾಹಿಸುವುದೆಂದೂ ನ್ಯಾಯಾಧೀಶರು ಆಕ್ಷೇಪಿಸಿದರು. ತಾ. 18-2-1981 ರಂದು ಈ ಆಧ್ಯಾದೇಶದ ನ್ಯಾಯಾನ್ಯಾಯದ ಕುರಿತು ವಿಚಾರಣೆ ನಡೆಯಲಿರುವು.

ದೇಶಾದ್ಯಂತ, ನ್ಯಾಯವಾದಿಗಳು, ಅರ್ಥಶಾಸ್ತ್ರಜ್ಞರು, ಶಿಕ್ಷಣ ತಜ್ಞರು, ಪ್ರಾಮಾಣಿಕರಾದ ರಾಜಕೀಯ ಮುಖಂಡರು ಮತ್ತು ಅಧಿಕಾರಿಗಳು, ಯೋಜನೇ ಆಯೋಗದ ಮಾಜೀ ಉಪಾಧ್ಯಕ್ಷರಾದ ಡಾ॥ ಡಿ. ಟಿ. ಲಕ್ಡೀವಾಲ ಮುಂತಾದವರು 'ಕಪ್ಪು ಹಣವನ್ನು ಬಿಳಿ ಹಣವನ್ನಾಗಿಸುವ' ಈ ಯೋಜನೆಯನ್ನು ಕಟುವಾಗಿ ಖಂಡಿಸಿದ್ದಾರೆ. ಕಳ್ಳ ಸಾಗಣಿಕೆದಾರರಿಗೆ, ಲಾಭ ಬಡುಕರಿಗೆ, ತೆರಿಗೆ ಕಳ್ಳರಿಗೆ, ಕಳ್ಳಸಂತೆ ಕದೀಮರಿಗೆ, ಆಕ್ರಮ ಸಂಗ್ರಹಗಾರರಿಗೆ, ಲಂಚಗಾರರಿಗೆ, ಸ್ವಾರ್ಥಸಾಧಕ ರಾಜಕೀಯ ಪುಢಾರಿಗಳಿಗೆ ಪ್ರಯೋಜನವಾಗುವಂತಹ ಈ ಯೋಜನೆಯನ್ನು ಸರ್ಕಾರ ಕೈಬಿಡಬೇಕೆಂದು ದೇಶಾದ್ಯಂತ ಒತ್ತಾಯಿಸಲಾಗುತ್ತಿದೆ. ಸುಪ್ರೀಂ ಕೋರ್ಟಿನಲ್ಲಿ ಈ ಆಧ್ಯಾದೇಶದ ಸಿಂಧುತ್ವವು ಇತ್ಯರ್ಥವಾಗುವವರೆಗೆ ಕಪ್ಪು ಹಣವನ್ನು ಬಿಳಿ ಹಣವನ್ನಾಗಿಸುದ ಈ ಯೋಜನೆಗೆ ಹೆಚ್ಚು ಪ್ರೋತ್ಸಾಹ ಸಿಗಲಾರದು.

ಕಪ್ಪುಹಣ-ಬಂಡವಾಳ ಶಾಹಿ ವ್ಯವಸ್ಥೆ :

ರಾಷ್ಟ್ರೀಯ ಭದ್ರತಾ ಕಾಯ್ದೆ (NSA)ಯನ್ನು ಕಪ್ಪು ಹಣವಂತರ ವಿರುದ್ಧ ಪ್ರಯೋಗಿಸುವುದಾಗಿ ಆಶ್ವಾಸನೆಕೊಟ್ಟ ಇಂದಿರಾ ಸರ್ಕಾರವು, ಇಂದು ಕಪ್ಪು ಹಣಗಾರರಿಗೆ ತಮ್ಮ ಅನ್ಯಾಯದ ಹಣವನ್ನು ಬಿಳಿಯಾಗಿಸಲು ಪ್ರೋತ್ಸಾಹ ನೀಡುತ್ತಿದೆ. ಬೆಲೆ ಏರಿಕೆ, ಬಡತನ, ನಿರುದ್ಯೋಗ ಇತ್ಯಾದಿಗಳ ವಿರುದ್ಧ ಹೋರಾಟ ಮಾಡುತ್ತಿರುವ ಎಡ ಪ್ರಜಾಪ್ರಭುತ್ವ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯನ್ನು ಚಲಾಯಿಸುತ್ತಿದೆ!

ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಮುಖ್ಯವಾಗಿ ಉತ್ಪಾದನೆ, ವಿತರಣೆಯಲ್ಲಿ ಖಾಸಗಿ ಹಾಗೂ ಸರಕಾರಿ ಕ್ಷೇತ್ರಗಳು ಪರಸ್ಪರ ಪೈಪೋಟಿ ಮಾಡುತ್ತಿರುವ ಮಿಶ್ರ ಆರ್ಥಿಕ ನೀತಿ ಇರುವಲ್ಲಿ, ಕಪ್ಪುಹಣ ಭೂತಾಕಾರವಾಗಿ ಬೆಳೆಯುವ ಅನಿವಾರ್ಯ.

○

ಎಸ್.ಎಫ್.ಐ. ಘಟಕದ ಉದ್ಘಾಟನೆ

ಬೆಳಗಾಂ ಜಿಲ್ಲಾ ಸವದತ್ತಿ ತಾಲ್ಲೂಕಿನ ಹಿರೇಕುಂಬಿಯಲ್ಲಿ ಎಸ್.ಎಫ್.ಐ. ಘಟಕವನ್ನು 11-2-81 ರಂದು ಉದ್ಘಾಟಿಸಲಾಯಿತು. ಸ್ಥಳೀಯ ಎ.ಡಿ.ಜಿ.ಬಿ. ಕಾಂಪೋಜೀಟ್ ಜ್ಯೂನಿಯರ್ ಕಾಲೇಜಿನಲ್ಲಿ ನಡೆದ ಸಮಾರಂಭವನ್ನು ಕಾಂ. ರುದ್ರಪ್ಪ ಕಾಯಿ (ರಾಜ್ಯ ಎಸ್.ಎಫ್.ಐ. ಉಪಾಧ್ಯಕ್ಷ) ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ನಿತ್ಯಾನಂದ ಸ್ವಾಮೀಜಿ ಮತ್ತು ಶ್ರೀ ಕೆ. ವಿ. ರಾಯಚೂರ (ಪ್ರಧಾನ ಕಾರ್ಯದರ್ಶಿ ರಾಜ್ಯ ಮಾ. ಶಾ. ನೌಕರರ ಸಂಘ) ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯದ್ದು ಪ್ರಾಚಾರ್ಯ ಶ್ರೀ ಎಲ್. ಎ. ಕುಲಕರ್ಣಿ ವಹಿಸಿದ್ದರು.

○

ಸಮಾಜವಾದಿ ಪೋಲೆಂಡಿನ ಬಿಕ್ಕಟ್ಟು

ಸುಮಾರು ಎಂಟು ತಿಂಗಳಿಂದೀಚೆಗೆ ಸಮಾಜವಾದೀ ಪೋಲೆಂಡ್ ಗುರುತರವಾದ ಒಂದು ರಾಜಕೀಯ ಬಿಕ್ಕಟ್ಟಿನ ಮೂಲಕ ಹಾದು ಹೋಗುತ್ತಿದೆ. ಇದು ಸಮಾಜವಾದೀ ದೇಶಗಳಿಗೆ ಮತ್ತು ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಗೆ ತೀವ್ರ ಆತಂಕ ಹಾಗೂ ಕಳವಳವನ್ನುಂಟು ಮಾಡಿದೆ. ತೀವ್ರಗೊಳ್ಳುತ್ತಿರುವ ಪೋಲೆಂಡಿನ ಬಿಕ್ಕಟ್ಟಿನಿಂದ ಪ್ರತಿಜ್ಞಾಬದ್ಧ ಕಮ್ಯುನಿಸ್ಟ್-ವಿರೋಧಿಗಳು, ಖಾಯಂ ಕ್ರಾಂತಿವಿರೋಧಿಗಳು ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನದ ನೇತೃತ್ವದ ಸಾಮ್ರಾಜ್ಯಶಾಹಿಗಳು ಆನಂದ ತುಂದಿಲರಾಗಿದ್ದಾರೆ. ಅವರು ಆ ದೇಶದ ಪ್ರತಿಕ್ರಾಂತಿಯ ಬೆಂಕಿಗೆ ತುಪ್ಪಸುರಿದು ಅಲ್ಲಿ ಮತ್ತೊಮ್ಮೆ ಬಂಡವಾಳಶಾಹಿಯನ್ನು ಸ್ಥಾಪಿಸಲು ತಮ್ಮಿಂದ ಸಾಧ್ಯವಾದ ಎಲ್ಲಾ ರೀತಿಯ ಪ್ರಯತ್ನ ನಡೆಸುತ್ತಿದ್ದಾರೆ.

ಪೂರ್ವ ಯೊರೋಪಿನ ದೇಶಗಳನ್ನು "ವಿಮೋಚನೆ"ಗೊಳಿಸಬೇಕೆಂಬ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳ ಅಸಾಧ್ಯ ಕನಸನ್ನು ಹಾಗೂ ಈ ಕ್ಷೇತ್ರದ ಸಮಾಜವಾದೀ ಪ್ರಭುತ್ವಗಳನ್ನು ಬುಡಮೇಲುಮಾಡಲು ಅವರು ನಡೆಸಿದ ಪ್ರಯತ್ನಗಳನ್ನು ಜಾಗತಿಕ ಸಮಾಜವಾದೀ ಶಕ್ತಿಗಳು, ಪೂರ್ವ ಯೂರೋಪಿನ ಸಮಾಜವಾದೀ ದೇಶಗಳು ಹಾಗೂ ಜಾಗತಿಕ ಶಾಂತಿ ಮತ್ತು ಸಮಾಜವಾದಕ್ಕೆ ಮತ್ತು ಆಕ್ರಮಣದ ವಿರುದ್ಧ ಭದ್ರಕೋಟೆಯಂತೆ ನಿಂತಿರುವ ಮಹಾನ್ ಸೋವಿಯತ್ ಯೂನಿಯನ್ ಸಂಪೂರ್ಣವಾಗಿ ನಿಷ್ಫಲಗೊಳಿಸಿದವು. ಶಾಂತಿ ಒಪ್ಪಂದಗಳಿಗೆ ಸಹಿಹಾಕುವುದರೊಂದಿಗೆ ಮತ್ತು ಪೋಲೆಂಡ್-ಜರ್ಮನಿಯ ಗಡಿ, ಓಡೆರ್-ನೀಸ್ಸೆ ರೇಖೆ, ಜೆಕೋಸ್ಲೋವಾಕಿಯಾ ಮತ್ತು ಜರ್ಮನ್ ಜನವಾದೀ ಗಣತಂತ್ರ ಹಾಗೂ ಜೆಕೋಸ್ಲೋವಾಕಿಯಾ ಮತ್ತು ಪಶ್ಚಿಮ ಜರ್ಮನಿಯ ನಡುವಿನ ಇತ್ಯರ್ಥ ಇತ್ಯಾದಿ ಎರಡನೇ ಮಹಾಯುದ್ಧದ ನಂತರದ ವಾಸ್ತವಿಕತೆಗಳನ್ನ ಸ್ವೀಕರಿಸುವುದರೊಂದಿಗೆ ಸಾಮ್ರಾಜ್ಯಶಾಹಿಗಳು ಪೂರ್ವಯೂರೋಪಿನ ಸಮಾಜವಾದೀ ದೇಶಗಳನ್ನು 'ವಿಮೋಚನೆ' ಗೊಳಿಸುವ ವ್ಯರ್ಥ ಕನಸನ್ನು ಬಿಟ್ಟುಬಿಡುತ್ತಾರೆ ಎಂದು ಆಶಿಸಲಾಗಿತ್ತು. ಹೆಲ್‌ಸಿಂಕಿಯಲ್ಲಿ ಸಹಿಹಾಕಲಾದ ಅಂತಿಮ ಕ್ರಮ (Final Act) ಹಾಗೂ ಅದರ ನಂತರದ ಒಡಂಬಡಿಕೆ (detente)ಯ ಪ್ರಯತ್ನಗಳು ಜಗತ್ತಿನ ಈ ಚಂಚಲ ಕ್ಷೇತ್ರದಲ್ಲಿ ಶಾಂತಿ ಸ್ಥಾಪನೆಯಾಗಬಹುದೆಂಬ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದವು.

ಆದರೆ ನಿರಂತರವಾಗಿ ತೀವ್ರವಾಗುತ್ತಿರುವ ಜಾಗತಿಕ ಬಂಡವಾಳಶಾಹೀ ಬಿಕ್ಕಟ್ಟು ಹಾಗೂ ಅಮೇರಿಕಾದ ಸಾಮ್ರಾಜ್ಯಶಾಹಿಗಳ ವಿವೇಕಹೀನ ಆಕ್ರಮಣಕಾರೀ ಶಾಖೆ ಆರಂಭಿಸಿದ ಪರಮಾಣು ಸ್ಪರ್ಧೆ ಶಾಂತಿ ಹಾಗೂ ಒಡಂಬಡಿಕೆಯ ಈ ನಿರೀಕ್ಷೆಗಳನ್ನು ಬುಡಸಹಿತ ಅಲ್ಲಾಡಿಸುತ್ತಿವೆ. ತಮ್ಮ ರೇಡಿಯೋ, ಪತ್ರಿಕೆ ಹಾಗೂ ಇತರ ಮಾಧ್ಯಮಗಳ ಮೂಲಕ ಸ್ವತಂತ್ರವೆಂದು ಹೇಳಿಕೊಳ್ಳುವ "Salidarity" (ಐಕ್ಯಮತ್ಯ) ಕಾರ್ಮಿಕಸಂಘ ಹಾಗೂ ಲೇಖ್ ವಾಲೆಸಾ ಎಂಬ ಹೆಸರಿನ ಸೋಗುಗಾರನ ನೇತೃತ್ವದಲ್ಲಿರುವ ಆ ಸಂಘದ ದುರಹಂಕಾರೀ ನಾಯಕತ್ವವನ್ನು ಅಂತರಾಷ್ಟ್ರೀಯ ಸಾಮ್ರಾಜ್ಯಶಾಹೀ ವೃತ್ತಗಳು ಹಾಡಿಹೊಗಳುತ್ತಿರುವ, ಅಟ್ಟಕ್ಕೇರಿಸುತ್ತಿರುವ ರೀತಿಯನ್ನು ನೋಡಿದರೆ ಈ ವೃತ್ತಗಳು ಹಾಗೂ ಅವರಲ್ಲಿನ ಉಗ್ರಗಾಮಿಗಳು ಸಮಾಜವಾದದ ಜಾಗತಿಕ ಶಕ್ತಿಗಳೊಂದಿಗೆ ಹಾಗೂ ಜಗತ್ತಿನ ಪ್ರಥಮ ಸಮಾಜವಾದೀ ದೇಶವಾದ ಸೋವಿಯೆತ್ ಯೂನಿಯನ್ನೊಂದಿಗೆ ಜಗಳಕ್ಕೆ ಕಾಲುಕೆರೆಯುವಂತೆ ಕಾಣುತ್ತದೆ. ಬಂಡುಕೋರ ನಾಯಕ ನಾಯಕ ವಾಲೇಸಾನ ಹೆಸರನ್ನು ನೋಬೆಲ್ ಶಾಂತಿ ಬಹುಮಾನಕ್ಕೆ ಸೂಚಿಸುವುದು ಜಾಗತಿಕ ಸಾಮ್ರಾಜ್ಯಶಾಹಿಗಳ ಅಸಾಧ್ಯ ಗೋಸುಂಬೆತನ ಹಾಗೂ ಠಕ್ಕತನದ ಪರಮಾವಧಿಯಲ್ಲವೇ ?

ಹಿಟ್ಲರನ ಫ್ಯಾಸಿಸಂನ ಉದಯವನ್ನು ಜಗತ್ತಿನಾದ್ಯಂತ ಹಾಡಿ ದೇವತ್ವಕ್ಕೇರಿಸಿ ಪೋಲೆಂಡಿನ ಜನರನ್ನು ಗ್ಯಾಸ್ ಚೇಂಬರ್ (ಅನಿಲ ಕೋಷ್ಟಕಗಳು)ಗಳಲ್ಲಿ ಸಾಮೂಹಿಕವಾಗಿ ಕೊಂದ ಹಿಟ್ಲರ್‌ನ ಕೃತ್ಯಗಳನ್ನು ತೀವ್ರತೆಯನ್ನು ಈಗಲೂ ಕುಗ್ಗಿಸಿ ಮಾತನಾಡುವ ಈ ಪಟಿಂಗರು ಹಾಗೂ ಅಪರಾಧಿಗಳು ಸೋವಿಯತ್ ಸಶಸ್ತ್ರ ಮಧ್ಯಪ್ರವೇಶ ನಡೆಸಿ ಪೋಲೆಂಡಿನ ಸ್ವಾತಂತ್ರ್ಯವನ್ನು ಮಣ್ಣುಮಾಡಲು ತಯಾರಾಗುತ್ತಿದೆಯೆಂಬ ಹಸೀ ಸುಳ್ಳನ್ನು ಹರಡುವುದರಲ್ಲಿ ಮಗ್ನರಾಗಿದ್ದಾರೆ. ಪೋಲೆಂಡನ್ನು ವಸಾಹತಾಗಿ ಪರಿವರ್ತಿಸಿ ಅದನ್ನು ಹರಿದು ಹಂಚಿಕೊಂಡು ಪೋಲೆಂಡಿನ ಪ್ರತಿಕ್ರಿಯಾವಾದಿಗಳು ಹಾಗೂ ಪ್ರತಿಕ್ರಾಂತಿಕಾರರೊಂದಿಗೆ ಶಾಮೀಲಾಗಿ ದಶಕಗಳ ಕಾಲ ಅಲ್ಲಿನ ಜನರ ರಕ್ತಹೀರಿದವರು ಇದೇ ಬ್ರಿಟಿಶ್, ಜರ್ಮನ್ ಹಾಗೂ ಇತರ ಸಾಮ್ರಾಜ್ಯಶಾಹಿಗಳು ಎಂಬ ಸತ್ಯವನ್ನು ಇವರೆಲ್ಲಾ ಮರೆಮಾಚ ಬಯಸುತ್ತಾರೆ. ಮಹಾನ್ ಅಕ್ಟೋಬರ್ ಸಮಾಜವಾದೀ ಕ್ರಾಂತಿ ಮತ್ತು ರಶಿಯಾದ ಕಾರ್ಮಿಕರು ಹಾಗೂ ರೈತರು ಜಾರ್‌ಶಾಹಿಯನ್ನು ವಿನಾಶಗೊಳಿಸಲು ಹರಿಸಿದ ತಮ್ಮ ರಕ್ತದ ಹೊಳೆಯೇ ಸ್ವತಂತ್ರ್ಯ ಪೋಲೆಂಡಿನ ಪ್ರಭುತ್ವ ಉದಯವಾಗಲು ಅವಕಾಶ ಕಲ್ಪಿಸಿದ್ದು. ಎರಡನೇ ಮಹಾಯುದ್ಧದ ಸಮಯದಲ್ಲಿ ಬಹುಪಾಲು ಫ್ಯಾಸಿಸ್ಟ್ ಆಕ್ರಮಣಗಳನ್ನು ಎದುರಿಸಿ ಹಿಟ್ಲರನ ಫ್ಯಾಸಿಸ್ಟ್ ಹಿಡಿತದಿಂದ ಪೋಲೆಂಡ್‌ನ ವಿಮೋಚನೆಗೆ ಹಾದಿ ಮಾಡಿಕೊಟ್ಟದ್ದು ಸೋವಿಯೆಟ್ ಕೆಂಪು ಸೇನೆ ಮತ್ತು ಸೋವಿಯೆಟ್ ಜನತೆ. ಕೇವಲ ಪೋಲೆಂಡಿನ ನೆಲದಲ್ಲೇ ಆರು ಲಕ್ಷ ಸೋವಿಯೆಟ್ ಸೈನಿಕರು ಮತ್ತು ಜೀವತ್ತೆತ್ತು ಪೋಲೆಂಡಿನ ವಿಮೋಚನೆಗೆ ಸಹಾಯ ಮಾಡಿದರು. ಪೋಲೆಂಡನ್ನು ನುಂಗಿ, ಅದರ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಮತ್ತು ಸಮಾಜವಾದೀ ಸಾಧನೆಗಳನ್ನು ನಾಶಗೊಳಿಸಲು ಹವಣಿಸುವ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ 35 ವರ್ಷಗಳಿಂದ ರಕ್ಷಣೆಯಾಗಿ ನಿಂತಿರುವುದೂ ಶಕ್ತಿಶಾಲೀ ಸಮಾಜವಾದೀ ಸೋವಿಯೆಟ್ ಯೂನಿಯನ್. ಪೋಲೆಂಡಿನ ಆಂತರಿಕೆ ಆಂತರಿಕ ವ್ಯವಹಾರದಲ್ಲಿ ಸಶಸ್ತ್ರ ಮಧ್ಯಪ್ರವೇಶ ಮಾಡಲು ಹವಣಿಸುತ್ತಿರುವ ಅಮೇರಿಕದ ಸಾಮ್ರಾಜ್ಯಶಾಹಿಗಳು ಹಾಗೂ ಅವರ ಸಮರ್ಥಕರು ತಾವು ಪೋಲೆಂಡಿನ ರಾಷ್ಟ್ರೀಯ ಸ್ವಾತಂತ್ರ್ಯದ ರಕ್ಷಕರೆಂದು ಹೇಳಿಕೊಂಡು ಸೋವಿಯೆಟ್ ಯೂನಿಯನನ್ನು ಪೋಲೆಂಡಿನ ಸ್ವಾತಂತ್ರ್ಯದ ಶತ್ರುವೆಂದು ಚಿತ್ರಿಸುವುದು ಧಾರ್ಷ್ಟ್ಯತನವೇ ಸರಿ.

ಸಮಾಜವಾದೀ ಪೋಲೆಂಡ್, ಸೋವಿಯೆಟ್ ಯೂನಿಯನ್ ಸೇರಿದಂತೆ ಯುರೋಪಿನ ಇತರ ಸಮಾಜವಾದೀ ದೇಶಗಳ ವಿರುದ್ಧ ಪಿತೂರಿಯನ್ನು ಬಯಲಿಗೆಳೆದು ಅದನ್ನು ಖಂಡಿಸುವುದರೊಂದಿಗೇ ಪೋಲೆಂಡಿನ ಸಂಯುಕ್ತ ಕಾರ್ಮಿಕರ ಪಕ್ಷ (PUWP) ಹಾಗೂ ಅದರ ನಾಯಕತ್ವದಲ್ಲಿರುವ ಪ್ರಭುತ್ವ ಮತ್ತು ಸರ್ಕಾರದ ತಪ್ಪು ಹಾಗೂ ಮಹಾಪರಾಧಗಳ ಬಗ್ಗೆಯೂ ನಮಗೆ ಪೂರ್ಣ ಅರಿವಿದೆ. ಈ ತಪ್ಪುಗಳು ಹಾಗೂ ಮಹಾಪರಾಧಗಳೇ ಲೇಖ್‌ವಾಲೇಸಾ ಹಾಗೂ ಆತನ "ಐಕ್ಯಮತ್ಯ" ಎಂದು ಕರೆಸಿಕೊಳ್ಳುವ ಕಾರ್ಮಿಕ ಸಂಘಕ್ಕೆ ಒಳ್ಳೆಯ ಆಹಾರ ಒದಗಿಸಿದ್ದು. ಪಾರ್ಟಿಯೊಳಗಿನ ಪ್ರಜಾಪ್ರಭುತ್ವ ನಡವಳಿಕೆಯನ್ನು ದೂಷಣೆಯ ರೀತಿಯಲಿ ಕಡೆಗಣಿಸಿ. ದೇಶದ ಕಾರ್ಮಿಕ ಸಂಘಗಳ ಕಾರ್ಯಚಟುವಟಿಕೆಯೊಳಗೆ ಹೋಗಬಾರದ ರೀತಿಯಲ್ಲಿ ಹೊಕ್ಕು, ಪಕ್ಷ ಮತ್ತು ಸಾಮೂಹಿಕ ಕಾರ್ಮಿಕ ವರ್ಗದ ಸಂಘಟಣೆಗಳ ನಡುವಿನ ಸೂಕ್ಷ್ಮ ವ್ಯತ್ಯಾಸವನ್ನು ನಾಶಮಾಡಿ, ಪಕ್ಷ ಮತ್ತು ಪ್ರಭುತ್ವದ ಚಟುವಟಿಕೆಗಳನ್ನು ಒಡ್ಡೊಡ್ಡಾಗಿ ಕಲಸು ಮೆಲಸು ಮಾಡಿ "ಮಹಾನೆಗೆತ" (Great heap) ಮಾದರಿಯ ಆರ್ಥಿಕ ಯೋಜನೆಯನ್ನು ಅದು ವಾಸ್ತವವಾಗಿ ಎಷ್ಟು ಕಾರ್ಯಸಾಧ್ಯ ಎಂಬುದರ ಕಡೆಗೆ ಸ್ವಲ್ಪವೂ ಗಮನ ಹರಿಸದೆ ಪೋಲೆಂಡಿನ ಸಂಯುಕ್ತ ಕಾರ್ಮಿಕರ ಪಕ್ಷ ಒಂದು ನಿಜವಾದ ಆರ್ಥಿಕ ಹಾಗೂ ರಾಜಕೀಯ ಕಲಸು ಮೇಲೊಗರವನ್ನೇ ಮಾಡಿತ್ತು. ಪೋಲೆಂಡಿನ ಕಮ್ಯುನಿಸ್ಟ್ ನಾಯಕತ್ವ ಮಾತ್ರವಲ್ಲ CMEA (ಪರಸ್ಪರ ಆರ್ಥಿಕ ಸಹಾಯದ ಪರಿಷತ್ತು)ಗೆ ಸೇರಿದ ಸೋದರ ಪಕ್ಷಗಳು (ಸೋವಿಯೆಟ್ ಯೂನಿಯನ್‌ನ ಕಮ್ಯುನಿಸ್ಟ್ ಪಕ್ಷವೂ ಸೇರಿ) ಪೋಲೆಂಡಿನ ಪಕ್ಷ ಮತ್ತು ಸರ್ಕಾರದೊಂದಿಗೆ ನಿಕಟ ಹಾಗೂ ಉತ್ತಮ ಬಾಂಧವ್ಯ ಹೊಂದಿದ್ದರೂ ಪೋಲೆಂಡಿನ ವ್ಯವಹಾರಗಳು ಭುಗಿಲೇಳುವವರೆಗೆ ಕಣ್ಣುಮುಚ್ಚಿ ಕೂತಂತಿತ್ತು. ಕಳೆದ ಸುಮಾರು 24 ವರ್ಷಗಳಲ್ಲಿ ಎರಡು ಅಥವಾ ಮೂರು ಸಲ ಈ ರೀತಿಯ ಕ್ಷೋಬೆಯುಂಟಾಗಿದ್ದರೂ ನಾವು ಮತ್ತೊಮ್ಮೆ 'ಐಕ್ಯಮತ್ಯ' ಕಾರ್ಮಿಕ ಸಂಘದ ಈ ಬಂಡಾಯವನ್ನು ನೋಡಬೇಕಾಗಿ ಬಂದಿರುವುದು ಇನ್ನಷ್ಟು ನೋವಿನ ವಿಷಯ. ಜಗತ್ತಿನ ಎಲ್ಲಾ ಕಮ್ಯುನಿಸ್ಟರು ಹಾಗೂ ಸಮಾಜವಾದದ ಹಿತೈಷಿಗಳು ಈ ಘಟನೆಗಳು ಹಾಗೂ ಒಂದಲ್ಲ ಒಂದು ಸಮಾಜವಾದೀ ದೇಶದಲ್ಲಿ ನಡೆಯುವ ಇಂತಹ ಘಟನೆಗಳ ಬಗ್ಗೆ ಬಹಳ ಬೇಸರಪಡುತ್ತಾರೆ.

"ಕಾರ್ಮಿಕ ಸಂಘಗಳ ಕೇಂದ್ರ ಪರಿಷತ್ತು"ಗೆ ಸೇರಿದ ಹನ್ನೆರಡು ಮಿಲಿಯ ಕಾರ್ಮಿಕರು ವಿವಿಧ ಸಾಮಾಜಿಕ ಸಂಸ್ಥೆಗಳಲ್ಲಿದ್ದಾರೆಯೆಂದು ಪೋಲೆಂಡ್ ಸಂಯುಕ್ತ ಕಾರ್ಮಿಕರ ಪಕ್ಷ(PUWP) ತನ್ನ ವಾರ್ತಾಸಂಸ್ಥೆಯ ಮೂಲಕ ಜಗತ್ತಿಗೆ ತಿಳಿಸುತ್ತದೆ. "ಕೆಲವೊಮ್ಮೆ ಅರ್ಧಕ್ಕಿಂತಲೂ ಹೆಚ್ಚು. ಕೆಲವು ಸಂದರ್ಭಗಳಲ್ಲಿ 90%ಕ್ಕಿಂತಲೂ ಹೆಚ್ಚು ಜನ ತಾವಾಗಿಯೇ ಹೊಸ ಕಾರ್ಮಿಕ ಸಂಘಟನೆಗಳನ್ನು ಸ್ಥಾಪಿಸಲಾರಂಭಿಸಿದರು. ಇವುಗಳಲ್ಲಿ ಹೆಚ್ಚಿನವು ಲೇಖ್ ವಾಲೇಸಾ ನೇತೃತ್ವದ ರಾಷ್ಟ್ರೀಯ ಸಮನ್ವಯ ಸಮಿತಿಗೆ ಸೇರಿದವು". ಈ 12 ಮಿಲಿಯ ಕಾರ್ಮಿಕರಲ್ಲಿ 25% ರಷ್ಟು PUWPಯ ಸದಸ್ಯರೆಂದು ವರದಿಯಾಗಿದೆ. ಪೋಲೆಂಡಿನ ಸರಕಾರ ಹಾಗೂ ಪಕ್ಷ ತಮ್ಮ ಕಾರ್ಮಿಕ ಸಂಘಗಳ ಕೇಂದ್ರ ಪರಿಷತ್ತು ಹಾಗೂ ಅದರಲ್ಲಿನ ದೊಡ್ಡ ಸಂಖ್ಯೆಯ ತಮ್ಮ ಸದಸ್ಯರು ಏನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಸಂಪೂರ್ಣವಾಗಿ ಮುಚ್ಚಿಕೊಳ್ಳುವಷ್ಟು ಶೋಚನೀಯ ರೀತಿಯಲ್ಲಿ ತಮ್ಮ ಚಟುವಟಿಕೆ ನಡೆಸುತ್ತಿದ್ದರೆಂದರೆ ಅದೇ ಪೋಲೆಂಡಿನ ನಾಯಕತ್ವದ ಅವಿವೇಕದ ಹಾಗೂ ಅಧಿಕಾರಶಾಹೀ ನಡವಳಿಕೆ ಬಗ್ಗೆ ಬಹಳಷ್ಟು ಹೇಳುತ್ತದೆ. ಸೈದ್ಧಾಂತಿಕ ಶಿಕ್ಷಣದಲ್ಲಿ ಸಡಿಲಿಕೆ ಹಾಗೂ ಇತರ ಗಂಭೀರ ತಪ್ಪುಗಳು ಈ ರೀತಿಯ ಪರಿಸ್ಥಿತಿ ಏರ್ಪಡಲು ಕಾರಣವಾದವು. ಪೋಲೆಂಡಿನ ಸಮಾಜವಾದವನ್ನು ಪ್ರತಿ ಕ್ರಾಂತಿಯ ಪಂಜಿನಿಂದ ರಕ್ಷಿಸಲು ತೀವ್ರತರವಾದ ಹಾಗೂ ತಕ್ಷಣದ ಪರಿಹಾರ ಕಂಡುಹಿಡಿಯುವುದು ಅಗತ್ಯ ಎಂಬುದು ಸುಸ್ಪಷ್ಟ. ಇದೇ ಸಂದರ್ಭದಲ್ಲಿ ಈ ಎಲ್ಲಾ ತಪ್ಪುಗಳು ಸಮಾಜವಾದ ಕಟ್ಟುವ ಭರದಲ್ಲಿ ಮತ್ತು ಮನುಷ್ಯನಿಂದ ಮನುಷ್ಯನ ಶೋಷಣೆ ಕೊನೆಗೊಳಿಸಬೇಕೆಂಬ ದುಡಿಯುವ ಜನರ ಬಹಳ ಕಾಲದ ಕನಸನ್ನು ನನಸಾಗಿಸುವ ದಾರಿಯಲ್ಲಿ ಸಂಭವಿಸಿದವು ಎಂಬುದೂ ನಮ್ಮ ಗಮನದಲ್ಲಿದೆ. PUWPಯ ಹೊಸ ನಾಯಕತ್ವ ಸ್ಟ್ಯಾನಿಸ್ಲಾವ್ ಕನಿಯಾರವರ ಮುಖಂಡತ್ವದಲ್ಲಿ ಈಗ ಉಂಟಾಗಿರುವ ವಿಕೃತಿಗಳನ್ನು ಕೊನೆಗೊಳಿಸಿ ಪೋಲೆಂಡನ್ನು ಸಮಾಜವಾದದ ದಾರಿಯಲ್ಲಿ ಸರಿಯಾಗಿ ದೃಢವಾಗಿ ಕೊಂಡೊಯ್ಯುತ್ತಾರೆಂದು ಜಗತ್ತಿನ ಎಲ್ಲಾ ಪ್ರಗತಿಶೀಲರು ಆಶಿಸುತ್ತಾರೆ.

ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ಅವರ ಸಾಮಾಜಿಕ-ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಹೋರಾಡುತ್ತಿದ್ದೇವೆ ಎಂದು ಘೋಷಿಸಿಕೊಂಡಿರುವ "ಐಕ್ಯಮತ್ಯ" (Solidarity) ಕಾರ್ಮಿಕ ಸಂಘಗಳು ತಾವು ಒಂದು ದುಡಿಯುವ ವರ್ಗದ ಪ್ರಭುತ್ವ ಹಾಗೂ ಸರಕಾರದಡಿ ಇದ್ದೇವೆ ಎಂಬ ವಾಸ್ತವಾಂಶವನ್ನು ತಮ್ಮ ಪ್ರಾಮಾಣಿಕ ತೊಂದರೆಗಳನ್ನು ನಿವಾರಿಸಲು ಹಾಗೂ ನ್ಯಾಯ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ನಡೆಸುವ ಹೋರಾಟ ಪೋಲೆಂಡ್ ಹಿಡಿದ ಸಮಾಜವಾದದ ದಾರಿಯನ್ನು ಹಾಳುಗೆಡವಬಾರದು ಎಂಬುದನ್ನೂ ಹಾಗೂ ಪ್ರತಿ ಕ್ರಾಂತಿಕಾರಿಗಳು ಮತ್ತು ಸಾಮ್ರಾಜ್ಯಶಾಹಿ ಬಲಿಗೆ ಬೀಳಬಾರದೆಂಬುದನ್ನೂ ಮರೆಯಬಾರದು.

"ಐಕ್ಯಮತ್ಯ" ಚಳುವಳಿಯ ಇತ್ತೀಚಿನ ಘಟ್ಟದಲ್ಲಿ ಪ್ರಭುತ್ವದಿಂದ ಕೇಳಿರುವ ವಿಚಿತ್ರ ಕೇಳಿಕೆಗಳು, ಸ್ಪಷ್ಟ ರಾಜಕೀಯ ಉದ್ದೇಶದಿಂದ ಆಗಾಗ ಬಾರಿಬಾರಿಗೂ ನಡೆಸುವ ಬಹಿಷ್ಕರಗಳಿಂದ ಉತ್ಪಾದನೆಗೆ ಉಂಟಾಗಿರುವ ಧಕ್ಕೆ ಇವೆಲ್ಲಾ ಅಪಾಯಕಾರೀ ಬೆಳವಣಿಗೆ. ಈ ಚಳುವಳಿ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಸೀಮಿತವಾಗಿರುವ ಬದಲು ನಿಜವಾಗಿ ಮಾರ್ಕ್ಸ್‌ವಾದ-ಲೆನಿನ್‌ವಾದ ಹಾಗೂ ಪೋಲೆಂಡಿನ ಸಮಾಜವಾದೀ ವ್ಯವಸ್ಥೆಯ ವಿರುದ್ಧದ ಚಳುವಳಿಯಾಗುತ್ತಿದೆ ಎಂದು ಎಲ್ಲಾ ವರದಿಗಳು ಸೂಚಿಸುತ್ತಿವೆ. ಪ್ರಧಾನಮಂತ್ರಿ ರಾಜೀನಾಮೆ ಕೊಟ್ಟು ಅವರ ಸ್ಥಾನದಲ್ಲಿ ರಕ್ಷಣಾ ಮಂತ್ರಿಗಳು ಅಧಿಕಾರ ನಿರ್ವಹಿಸುವರೆಂದು ಹೇಳಲಾಗಿದೆ. "ಐಕ್ಯಮತ್ಯ"ದ ನಾಯಕತ್ವ ಹಾಗೂ ಅನುಯಾಯಿಗಳಲ್ಲಿ ಹೆಚ್ಚಿನ ಜವಾಬ್ದಾರಿ ಭಾವನೆ ಮೂಡಿ ಅವರು ಪರಿಸ್ಥಿತಿ ಇನ್ನಷ್ಟು ಹದಗೆಡದಂತೆ ನೋಡಿಕೊಳ್ಳುವರೆಂದು ಆಶಿಸುತ್ತೇವೆ. ಲೇಖ್ ವಾಲೆಸಾ ಮತ್ತು ಆತನ "ಐಕ್ಯಮತ್ಯ" ಸಂಘ ಹಣಾಹಣಿ ನಡೆಯಲೇಬೇಕೆಂದು ನಿರ್ಧರಿಸಿದ್ದರೆ PUWP ಹಾಗೂ ಪೋಲೆಂಡಿನ ಸರಕಾರ ತನ್ನ ದೇಶದ ಸಮಾಜವಾದದ,

[7ನೇ ಪುಟ ನೋಡಿ]

ಕಾರ್ಮಿಕರ ಮೂಲಹಕ್ಕುಗಳಿಗೆ ಕೊಡಲಿಯೇಟು ಹಾಕುವ ಎಲ್. ಐ. ಸಿ. ಸುಗ್ರೀವಾಜ್ಞೆ

ಜನವರಿ 31ನೇ ತಾರೀಖಿನಂದು ರಾಷ್ಟ್ರಪತಿ ಶ್ರೀ ನಿಲಂ ಸಂಜೀವರೆಡ್ಡಿ ಅವರು ಎಲ್.ಐ.ಸಿ. ನೌಕರರ ವೇತನ, ಬೋನಸ್ ಮತ್ತಿತರ ಸೇವಾ ಸೌಲಭ್ಯಗಳ ಬಗ್ಗೆ ಏಕಪಕ್ಷೀಯ ನಿರ್ಧಾರಕೈಗೊಳ್ಳಲು ಸರ್ಕಾರಕ್ಕೆ ಅಧಿಕಾರ ನೀಡುವಂತಹ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿದರು. 1956ರ ಎಲ್.ಐ.ಸಿ. ಆ್ಯಕ್ಟ್‌ಗೆ ತಿದ್ದುಪಡಿ ತರುವ ಮೂಲಕ ಎಲ್ಲೈಸಿ ನೌಕರರನ್ನು ಕೈಗಾರಿಕಾ ವಿವಾದ ಕಾನೂನಿನ ವ್ಯಾಪ್ತಿಯಿಂದ ಹೊರತುಪಡಿಸಿ ಅವರ ಸಾಮೂಹಿಕ ಚೌಕಾಸಿಯ ಹಕ್ಕನ್ನು ಕಿತ್ತುಕೊಳ್ಳುವ ಈ ಕರಾಳ ಕಾಯಿದೆಯ ವಿರುದ್ಧ ಪ್ರತಿಭಟಿಸಿ ಜೀವವಿಮಾ ಕಾರ್ಪೋರೇಶನಿನ ಮೂರು ಮತ್ತು ನಾಲ್ಕನೇ ವರ್ಗಕ್ಕೆ ಸೇರಿದ ನೌಕರರೆಲ್ಲರೂ ತಾ. 2-2-1981 ಮತ್ತು 3-2-81ರಂದು, ಅಖಿಲ ಭಾರತ ವಿಮಾನೌಕರರ ಸಂಘ ನೀಡಿದ ಕರೆಯಂತೆ ಎರಡು ದಿನಗಳ ಸಂಪೂರ್ಣ ಮುಷ್ಕರ ಆಚರಿಸಿದರು. ಇದರ ಬೆನ್ನ ಹಿಂದೇ ಅಂದರೆ 4-2-1981 ರಂದು ಸರ್ಕಾರದ ಅರ್ಥಖಾತೆ ನೋಟೀಫಿಕೇಶನ್ ಒಂದನ್ನು ಹೊರಡಿಸುವ ಮೂಲಕ ಎಲ್.ಐ.ಸಿ. ನೌಕರರಿಗೆ ನೀಡಲಾಗುತ್ತಿದ್ದ ಬೋನಸನ ಪ್ರಮಾಣವನ್ನು ಸರ್ಕಾರದ ಪರಿಗಣನೆಗೆ ಒಳಪಡಿಸುವಂತಹ ಮತ್ತು ಅವರಿಗೆ ನೀಡಲಾಗುತ್ತಿರುವ ತುಟ್ಟಿಭತ್ತೆಯ ಗರಿಷ್ಟ ಮೊತ್ತವನ್ನು ಬೆಲೆ ಸೂಚ್ಯಂಕದಲ್ಲಿನ ಪ್ರತಿ ನಾಲ್ಕು ಅಂಕಗಳ ಏರಿಕೆಗೆ ರೂ. 15-80ಕ್ಕೆ ಸೀಮಿತಗೊಳಿಸುವ ಇನ್ನೊಂದು ಕ್ರಮವನ್ನು ಕೈಗೊಳ್ಳಲಾಯಿತು. ಇದನ್ನು ಪ್ರತಿಭಟಿಸಿ ಎ.ಐ.ಐ.ಇ.ಎ. ಹಾಗೂ ಇತರ ಸಂಘಟನೆಗಳು ನೀಡಿದ ಕರೆಯಂತೆ ಎಲ್ಲೈಸಿಯ ನೌಕರರೆಲ್ಲರೂ ಮತ್ತೆ ತಾ. 5-2-1981ರಂದು ಸಂಪೂರ್ಣ ಹರತಾಳ ಆಚರಿಸಿದರು. ಹೆಚ್ಚಿನ ಕಚೇರಿಗಳಲ್ಲಿ ಮೇಲಾಧಿಕಾರಿಗಳೂ ನೌಕರರೊಂದಿಗೆ ಸಹಾನುಭೂತಿ ತೋರಿಸಿ ಮುಷ್ಕರ ಆಚರಿಸಿದ ಕಾರಣ ಕಚೇರಿಗಳ ಬಾಗಿಲುಗಳೂ ತೆರೆಯಲ್ಪಡಲಿಲ್ಲ. ಹೀಗೆ ಫೆಬ್ರವರಿ ತಿಂಗಳ ಮೊದಲ ವಾರವೊಂದರಲ್ಲೇ ಮೂರು ದಿನಗಳ ಕಾಲ ಎಲ್ಲೈಸಿಯ ಕಾರ್ಯಕಲಾಪಗಳು ದೇಶಾದ್ಯಂತ ಸಂಪೂರ್ಣ ಸ್ಥಗಿತಗೊಂಡವು. ರಾಷ್ಟ್ರಾಧ್ಯಕ್ಷರು ಹೊರಡಿಸಿದ್ದ ಸುಗ್ರೀವಾಜ್ಞೆ ಸಂಸತ್ತಿನ ಪ್ರಸಕ್ತ ಅಧಿವೇಶದ ಮುಂದೆ ಕಾಯ್ದೆಯಾಗಿ ಮಂಡಿಸಲ್ಪಡಲಿದೆ. ಈ ನಡುವೆ ಜೀವವಿಮಾ ನೌಕರರು ತಮ್ಮ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಲಿದ್ದಾರೆ.

ಎಲ್ಲೈಸಿ ನೌಕರರಿಗೆ ಸಂಬಂಧಿಸಿ ರಾಷ್ಟ್ರಾಧ್ಯಕ್ಷರು ಹೊರಡಿಸಿರುವ ಸುಗ್ರೀವಾಜ್ಞೆ ಮತ್ತು ಆ ಬಳಿಕ ಸರ್ಕಾರ ಕೈಗೊಂಡ ಕ್ರಮಗಳು ಕರಾಳ ಅಧ್ಯಾಯವೊಂದಕ್ಕೆ ನಾಂದಿ ಹಾಕಿವೆ. ಜೀವವಿಮಾ ನೌಕರರು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ತಮ್ಮ ಸಂಘಟನಾ ಬಲದಿಂದ ಸಾಧಿಸಿಕೊಂಡ ಅನೇಕ ಸವಲತ್ತು ಮತ್ತು ಸೌಲಭ್ಯಗಳನ್ನು ಕೇಂದ್ರ ಸರ್ಕಾರ ಒಂದೇ ಏಟಿಗೆ ಕಸಿದುಕೊಳ್ಳುವ ಸನ್ನಾಹ ನಡೆಸಿದೆ. ಕಳೆದ ಹತ್ತು ವರ್ಷಗಳಿಂದಲೂ ಎಲ್ಲೈಸಿ, ಬ್ಯಾಂಕ್ ಮತ್ತಿತರ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ನೌಕರರನ್ನು 'ಸ್ಥಿತಿವಂತರು' 'ಉನ್ನತ ವೇತನ ದ್ವೀಪ'ಗಳಲ್ಲಿರುವವರು ಎಂಬಿತ್ಯಾದಿ ಸುಳ್ಳು ಆರೋಪಗಳಿಗೆ ಒಳಪಡಿಸಿ ಅವರ ವೇತನ ಮಟ್ಟವನ್ನು ಅತಿಶಯೋಕ್ತಿ ಮಾಡಿ ಪ್ರಚಾರಮಾಡುವ ಮೂಲಕ ಸಾರ್ವಜನಿಕರಲ್ಲಿ ಕೆಟ್ಟ ಅಭಿಪ್ರಾಯ ಮೂಡಿಸಿದ್ದ ಕೇಂದ್ರ ಸರ್ಕಾರ ಇದೀಗ ಈ ನೌಕರರ ಮೇಲೆ ಕೊಡಲಿಯೇಟು ಹಾಕಲು ಪ್ರಾರಂಭಿಸಿದೆ. ಸಂಘಟಿತ ನೌಕರರನ್ನು ಅಸಂಘಟಿತ ನೌಕರರ ವಿರುದ್ಧ, ಸರ್ಕಾರಿ ನೌಕರರನ್ನು ಶಿಕ್ಷಕರ ವಿರುದ್ಧ, ಶಿಕ್ಷಕರನ್ನು ಕೃಷಿಕಾರ್ಮಿಕರು ಮತ್ತು ರೈತರ ವಿರುದ್ಧ ಮತ್ತು ಇವರೆಲ್ಲರನ್ನೂ ನಿರುದ್ಯೋಗಿಗಳ ವಿರುದ್ಧ ಎತ್ತಿಕಟ್ಟಿ ಎಲ್ಲರನ್ನೂ ಏಕಕಾಲಕ್ಕೆ ವಂಚಿಸುತ್ತಿರುವ ಆಳುವ ವರ್ಗಗಳು ಇನ್ನು ಪ್ರತಿಯೊಂದು ವಿಭಾಗನ ಕಾರ್ಮಿಕರ ಮೇಲೂ ತಮ್ಮ ಗದಾಪ್ರಹಾರವನ್ನು ಪ್ರಾರಂಭಿಸುವುದು ಖಂಡಿತ. ಸರ್ಕಾರದ ಈ ಸುಗ್ರೀವಾಜ್ಞೆಯ ವಿರುದ್ಧ ಎಲ್.ಐ.ಸಿ. ನೌಕರರು ನಡೆಸುತ್ತಿರುವ ಹೋರಾಟ ಈ ದೃಷ್ಟಿಯಿಂದ ತುಂಬಾ ಪ್ರಾಮುಖ್ಯಗಳಿಸಿದೆ.

ಎಲ್.ಐ.ಸಿ. ಮೂರನೇ ದರ್ಜೆಯ ನೌಕರರಿಗೆ ರೂ. 3000/- ಸಂಬಳ ದೊರೆಯುತ್ತದೆಂದೂ ನಾಲ್ಕನೇ ದರ್ಜೆಯ ನೌಕರರಿಗೆ 1300ರೂ.ಗಳಿಗೂ ಮಿಕ್ಕಿದ ವೇತನ ಸಿಗುತ್ತದ್ದೆಂದೂ ಸರ್ಕಾರದ ಜಂಟಿ ಕಾರ್ಯದರ್ಶಿಗೂ ಸಹ ಇಷ್ಟು ವೇತನ ಸಿಗುತ್ತಿಲ್ಲವೆಂದೂ, ಹಾಗಾಗಿ ವೇತನಗಳಿಲ್ಲಿನ ಈ ವಿಪರ್ಯಾಸವನ್ನು ತೊಡೆದು ಹಾಕುವ ಉದ್ದೇಶದಿಂದ ಸರ್ಕಾರ ಈ ಕ್ರಮಕೈಗೊಂಡಿತೆಂದೂ ಸರ್ಕಾರದ ವಕ್ತಾರರು ಹೇಳಿಕೆಯಿತ್ತಿದ್ದಾರೆ. ಇದನ್ನು ಇನ್ನಷ್ಟು ಉತ್ಪ್ರೇಕ್ಷೆಮಾಡಿ ಕೆಲವು ಬಂಡವಾಳಶಾಹಿ ಪತ್ರಿಕೆಗಳೂ ತಮ್ಮ ಸಂಪಾದಕೀಯದಲ್ಲಿ ಸರ್ಕಾರದ ಕ್ರಮವನ್ನು ಶ್ಲಾಘಿಸಿವೆ. ಸರ್ಕಾರದ ಈ ಅಪಾಲಾಪ ಸಂಪೂರ್ಣ ಸುಳ್ಳಾಗಿದ್ದು ಎಲ್.ಐ.ಸಿ.ಯ 45000 ಮೂರನೇ ಮತ್ತು ನಾಲ್ಕನೇ ವರ್ಗದ ನೌಕರರಲ್ಲಿ ಕೇವಲ ಬೆರಳೆಣಿಕೆಯಷ್ಟು ಸುಪರಿಂಟೆಂಡೆಂಟ್‌ರುಗಳಿಗೆ, ಅದೂ ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ, ಪ್ರಮೋಶನ್ ಗಳಿಸಿ, ನಿವೃತ್ತಿಯ ಅಂಚಿನಲ್ಲಿರುವವರಿಗೆ ಮಾತ್ರ ಸರ್ಕಾರ ಹೇಳುತ್ತಿರುವಂತಹ ಸಂಬಳ ದೊರೆಯುತ್ತಿರಬಹುದು; ಮತ್ತು ಇವರ ಸಂಖ್ಯೆ ಹತ್ತಿಪ್ಪತ್ತಕ್ಕೆ ಮೀರಲಾರದು. ಇಂತಹ ಇನ್ನೇನು ನಿವೃತ್ತಲಾಗಲಿರುವ ನೌಕರರ ಸಂಬಳವನ್ನು ಇದೇ ತಾನೇ ಕೆಲಸಕ್ಕೆ ಸೇರುವ ಸರ್ಕಾರದ ಅಧಿಕಾರಿಯೊಬ್ಬರ ಪ್ರಾರಂಭಿಕ ವೇತನದೊಂದಿಗೆ ಹೋಲಿಸಿ ಜನಸಾಮಾನ್ಯರಲ್ಲಿ ತಪ್ಪುಕಲ್ಪನೆ ಮೂಡಿಸುವ ಸರ್ಕಾರದ ಉದ್ದೇಶ ಕುಹಕತನದ್ದು. ಅಸಮಾನತೆ, ತಾರತಮ್ಯಗಳನ್ನು ಅಂಗೀಕರಿಸಿಕೊಂಡಿರುವ ಮತ್ತು ಅದನ್ನು ಇನ್ನೂ ಮುಂದುವರೆಸಿಕೊಂಡೇ ಹೋಗುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಅಪಾರ ತ್ಯಾಗ, ಹೋರಾಟ ಮಾಡಿದ ಕಾರ್ಮಿಕ ವರ್ಗದ ಕೆಲವು ವಿಭಾಗಗಳಿಗೆ ಇತರರಿಗಿಂತ ಅಲ್ಪ ಸ್ವಲ್ಪ ಹೆಚ್ಚು ವೇತನ ಸಿಕ್ಕಿರುವುದರಲ್ಲಿ ಆಶ್ಚರ್ಯ ಪಡಬೇಕಾದ್ದೇನೂ ಇಲ್ಲ. ಅದು ತಪ್ಪೂ ಅಲ್ಲ. ಮೇಲಾಗಿ ದೇಶದ ಸಂಪತ್ತಿನ ಬಹು ದೊಡ್ಡ ಭಾಗವನ್ನು ಕಬಳಿಸುತ್ತಿರುವವರು ನೌಕರ ವರ್ಗವಲ್ಲ. ಕಳೆದ ಮೂವತ್ನಾಲ್ಕು ವರ್ಷಗಳಿಂದ ನಮ್ಮ ದೇಶದ ಆಡಳಿತ ನಡೆಸುತಿದ್ದ ಸರ್ಕಾರಗಳು ಅನುಸರಿಸಿಕೊಂಡು ಬಂದಿದ್ದ ಬಂಡವಾಳಶಾಹಿಪರ ಆರ್ಥಿಕ ಧೋರಣೆಗಳ ಫಲವಾಗಿ ದೇಶದ ಸಂಪತ್ತಿನ ಅತ್ಯಂತ ದೊಡ್ಡ ಭಾಗ ಗುತ್ತೇದಾರಿ ಬಂಡವಾಳಶಾಹಿಗಳ ಕೈವಶವಾಗಿದೆ. ಟಾಟಾ, ಬಿರ್ಲಾ, ದಾಲ್ಮಿಯಾರಂತಹ ಏಕಸ್ವಾಮ್ಯವಾದಿ ಮನೆತನಗಳ ಸಂಪತ್ತು ಕಳೆದ ಮೂವತ್ತು ವರ್ಷಗಳಲ್ಲಿ ನೂರುಪಾಲಷ್ಟು ವೃದ್ಧಿಯಾಗಿದೆ. ಈ ಮನೆತನಗಳು ವಿನಿಯೋಗಿಸಿದ್ದ ಬಂಡವಾಳದ ಮೇಲೆ ಅಭೂತಪೂರ್ವಲಾಭ ಬರುತ್ತಿದೆ. ಈ ಲಾಭದ ಮೇಲೆ ಯಾವ ಮಿತಿಯನ್ನು ಹೇರಲಾಗಿಲ್ಲ. ಉತ್ಪಾದಿತ ಮೌಲ್ಯದಲ್ಲಿ ಕಾರ್ಮಿಕರು ಮತ್ತು ನೌಕರರಿಗೆ ಸಿಗುವ ಪಾಲಿನ ಪ್ರಮಾಣ ವರ್ಷ ವರ್ಷ ಕಡಿಮೆಯಾಗುತ್ತಿದೆ; ಅದೇವೇಳೆ ಉತ್ಪಾದನಾ ಸಾಧನಗಳ ಒಡೆತನ ಹೊಂದಿರುವ ಮಾಲೀಕ ವರ್ಗಗಳ ಪಾಲಿಗೆ ಹೋಗುವ ಭಾಗದ ಪ್ರಮಾಣ ಹೆಚ್ಚಾಗುತ್ತಲೇ ಇದೆ. ತೆರಿಗೆಗಳ್ಳತನದ ಮೂಲಕ ಸಂಗ್ರಹಿಸಲಾದ ಕಪ್ಪುಹಣ ಅಂದಾಜು ರೂ. 25,000 ಕೋಟಿಯನ್ನು ಮೀರಿ ಹೆಚ್ಚು ಕಡಿಮೆ ಒಂದು ಪರ್ಯಾಯ ಅರ್ಥವ್ಯವಸ್ಥೆಯಾಗಿ ಕಾರ್ಯವೆಸಗುತ್ತಿದೆ. ಕಪ್ಪುಹಣ ಮತ್ತು ಲಾಭಬಡುಕರು ಹಾಗೂ ಕಚ್ಚಾ ವ್ಯಾಪಾರಿಗಳು ಅಕ್ರಮವಾಗಿ ಗಳಿಸಿಕೊಂಡಿರುವ ಹಣಕಾಸು ತೀವ್ರ ಹಣದುಬ್ಬರಕ್ಕೆ ಎಡೆಮಾಡಿಕೊಟ್ಟಿದೆ. ಇದರಲ್ಲಿ ಜೊತೆ ಪ್ರತಿವರ್ಷ ಸರ್ಕಾರ ತುಂಬಿಸುತ್ತಿರುವ ಕೊರತೆ ಹಣವೂ ಸೇರಿ ದೇಶದ ಆರ್ಥಿಕ ಪರಿಸ್ಥಿತಿ ಅಲ್ಲೋಲಕಲ್ಲೋಲವಾಗಿದೆ. ತೀವ್ರವಾಗುತ್ತಿರುವ ಆರ್ಥಿಕ ಮುಗ್ಗಟ್ಟನ್ನು ತಡೆಯಲು ಕಪ್ಪುಹಣವನ್ನೂ ಮತ್ತು ಅಕ್ರಮವಾಗಿ ಗಳಿಸಲಾದ ಸಂಪತ್ತನ್ನೂ ಮುಟ್ಟುಗೋಲು ಹಾಕಬೇಕಾದುದು ಅತ್ಯಗತ್ಯವಾದರೂ ಸರ್ಕಾರಕ್ಕೆ ಬೆಂಬಲವಾಗಿರುವವರು ಮತ್ತು ಸರಕಾರ ಪ್ರತಿನಿಧಿಸುವ ಶಕ್ತಿಗಳು ಕಪ್ಪುಹಣ ಮತ್ತು ಅಕ್ರಮ ಸಂಪತ್ತಿನ ಮಾಲೀಕರೇ ಆದ ಕಾರಣ ಸರ್ಕಾರಕ್ಕೆ ಅವರನ್ನು ಮುಟ್ಟುವ ಧೈರ್ಯವಿಲ್ಲ. ಹಾಗಾಗಿ ಆರ್ಥಿಕ ಮುಗ್ಗಟ್ಟಿನ ಹೊರೆಯನ್ನು ಕಾರ್ಮಿಕ ವರ್ಗದ ಮೇಲೆ ಜಾರಿಸಿ ಬಿಡಲು ಆಳುವ ವರ್ಗಗಳು ಅನವರತಪ್ರಯತ್ನಿಸುತ್ತಿವೆ. ಅಸಮಾನತೆ ಮತ್ತು ವೈಪರೀತ್ಯಗಳಿಗೆ ಅವಕಾಶ ಮಾಡಿಕೊಡುವ ಈ ವರ್ಗ ವ್ಯವಸ್ಥೆಯನ್ನು ವಿಮಾನೌಕರರಾಗಲೀ ವರ್ಗಪ್ರಜ್ಞೆಯಿರುವ ಯಾವ ಕಾರ್ಮಿಕರಾಗಲೀ ಒಪ್ಪಿಕೊಳ್ಳುತ್ತಿಲ್ಲವಾದ ಈ ವರ್ಗವ್ಯವಸ್ಥೆಯ ದುಷ್ಪರಿಣಾಮಗಳ ಹೊರೆಯನ್ನೂ ಅವರು ಸ್ವೀಕರಿಸಲು ಸಾಧ್ಯವಿಲ್ಲ. ಈ ವ್ಯವಸ್ಥೆಯೊಳಗೇ ಸ್ವಲ್ಪ ಹೆಚ್ಚು ವೇತನ ಪಡೆಯುತ್ತಿರುವವರ ಸಂಬಳವನ್ನು ಕಡಿತ ಮಾಡುವ ಮೂಲಕ ಕಾರ್ಮಿಕರ ನಡುವೆ 'ಸಮಾನತೆ' ತರಬಯಸುವ ಸರ್ಕಾರದ ಒರಟು ಕ್ರಮವನ್ನು ಯಾರೂ ಒಪ್ಪಿಕೊಳ್ಳಲಾರರು. ಒಂದೆಡೆ ಬಂಡವಾಳಗಾರರು ಮತ್ತು ದೊಡ್ಡ ಮಾಲಕರು ಇನ್ನೊಂದೆಡೆ ಕಾರ್ಮಿಕ ವರ್ಗ ಮತ್ತು ಬಡಜನತೆ ಇವೆರಡೂ ವರ್ಗಗಳ ನಡುವಿನ ವ್ಯತ್ಯಾಸವನ್ನು ಅಳಿಸುವ ಪ್ರಯತ್ನ ಮಾಡುವ ಬದಲು ಸರ್ಕಾರ ಕೆಳಗಿನ ಹಂತದಲ್ಲಿ ಮಾತ್ರವೇ ಸಮಾನತೆ ತರಲು ಬಯಸುತ್ತಿದೆ. ಇದು ಸಮೃದ್ಧಿಯನ್ನು ಹಂಚಿಕೊಳ್ಳುವ ಬದಲು ಬಡತನವನ್ನು ಮಾತ್ರ ಸಮಾನವಾಗಿ ಹಂಚಿ ಬಿಡುವ ಹವಣಿಕೆ.

ಎಲ್.ಐ.ಸಿ. ನೌಕರರ ವೇತನ ಮತ್ತು ಬೋನಸ್ ಪ್ರಶ್ನೆಗೆ ಸಬಂಧಿಸಿ ರಾಷ್ಟ್ರಪತಿ ಅವರು ಸುಗ್ರೀವಾಜ್ಞೆ ಹೊರಡಿಸಲು ಇನ್ನೂ ಒಂದು ಹಿನ್ನೆಲೆ ಇದೆ. ಕಳೆದ ನವಂಬರ 10ರಂದು ಸರ್ವೋನ್ನತ ನ್ಯಾಯಾಲಯದ ನ್ಯಾ.ಮೂ. ವಿ. ಆರ್. ಕೃಷ್ಣಅಯ್ಯರ್ ಅವರ ನೇತೃತ್ವದ ನ್ಯಾಯಪೀಠವು ಎಲ್.ಐ.ಸಿ. ನೌಕರರಿಗೆ 1974ರ ಒಪ್ಪಂದದ ಪ್ರಕಾರ 15%ರಷ್ಟು ಬೋನಸ್ ಪ್ರತಿವರ್ಷ ನೀಡಬೇಕೆಂದೂ 1974ರ ಒಪ್ಪಂದದ ಅವಧಿ ಮುಗಿದಿದ್ದರೂ ಅದರ ಬಳಿಕ ಹೊಸತೊಂದು ಒಪ್ಪಂದವಾಗಲೀ ಅವಾರ್ಡ್ ಆಗಲೀ ಉಂಟಾಗದಿರುವ ಕಾರಣ ಹಿಂದಿನ ಒಪ್ಪಂದದ ಎಲ್ಲ ಸವಲತ್ತುಗಳೂ ನೌಕರರಿಗೆ ಲಭ್ಯವಾಗಬೇಕೆಂದು ತೀರ್ಪಿತ್ತಿತು. 1974ರ ಒಪ್ಪಂದಕ್ಕೆ ತನ್ನದೇ ಆದ ಇತಿಹಾಸವಿದೆ. ಸುಮಾರು ಒಂದು ವರ್ಷ ಕಾಲ ತೀವ್ರ ಹೋರಾಟ ನಡೆಸಿ 250ಕ್ಕೂ ಮಿಕ್ಕಿದ ನೌಕರರ ಮುಂದಾಳುಗಳು ಅಮಾನತುಗೊಂಡು, ಸಾವಿರಾರು ನೌಕರರು ವೇತನ ಕಡಿತದ ಶಿಕ್ಷೆಯನ್ನು ಎದುರಿಸಿ, ಆರು ವಿಭಾಗ ಕಚೇರಿಗಳಲ್ಲಿ ಲಾಕ್‌ಔಟ್ ಸಾರಲ್ಪಟ್ಟು ಅಂತಹ ವಿಭಾಗಗಳ ಶಾಖೆಗಳು ಅನಿರ್ದಿಷ್ಟಾವಧಿಯ ಮುಷ್ಕರ ನಡೆಸುವ ಮೂಲಕ ಜೀವವಿಮಾ ನೌಕರರು ಸರ್ಕಾರವನ್ನು ಮಣಿಸಿ 1974ರ ಒಪ್ಪಂದ ಮಾಡಿಕೊಂಡಿದ್ದಾರೆ. ಶೇಕಡಾ 80ಕ್ಕೂ ಹೆಚ್ಚು ಜೀವವಿಮಾ ನೌಕರರನ್ನು ಪ್ರತಿನಿಧಿಸುವ ಅಖಿಲಭಾರತ ವಿಮಾ ನೌಕರರ ಸಂಘ ಈ ಹೋರಾಟಕ್ಕೆ ನೀಡಿದ ಸಮರಧೀರ ನೇತೃತ್ವದಿಂದಾಗಿ ವಿಮಾ ನೌಕರರ ಈ ವಿಜಯ ಸಾಧ್ಯವಾಗಿತ್ತು. ಆದರೆ ಇಂಡಿಯನ್ ಏರ್‌ಲೈನ್ಸ್ ನೌಕರರಹೋರಾಟವನ್ನು ಹತ್ತಿಕ್ಕಿ ಆಮೇಲೆ ರೈಲ್ವೇ ನೌಕರರ ಚಾರಿತ್ರಿಕ ಹೋರಾಟವನ್ನೂ ಬಗ್ಗುಬಡಿದ ಸರ್ಕಾರಕ್ಕೆ ಜೀವವಿಮಾ ನೌಕರರು ಮಾತ್ರ ಇದೇ ಕಾಲಕ್ಕೆ ಗಳಿಸಿದ ವಿಜಯ ಅಸಹನೀಯವಾಯಿತು. 1975ರಲ್ಲಿ ಜ್ಯಾರಿಗೆ ತರಲಾದ ಬೋನಸ್ (ತಿದ್ದುಪಡಿ) ಕಾಯಿದೆಯ ವ್ಯಾಪ್ತಿಗೆ ಎಲ್ಲೈಸಿ ನೌಕರರನ್ನೂ ಎಳೆದು ತಂದು ಅವರಿಗೆ ನೀಡಲಾಗುತ್ತಿದ್ದ 15% ಬೋನಸ್ಸನ್ನು ಕಡಿತಗೊಳಿಸಲು ಯತ್ನಿಸಲಾಯಿತು. ಈ ಉದ್ದೇಶಕ್ಕಾಗಿ 1976ರ ಎಲ್.ಐ.ಸಿ. (ಒಪ್ಪಂದದ ತಿದ್ದುಪಡಿ) ಕಾಯಿದೆಯನ್ನು ಸರ್ಕಾರವು ಜ್ಯಾರಿಮಾಡಿತು. ತುರ್ತು ಪರಿಸ್ಥಿತಿಯ ವೇಳೆ ಈ ಕಾನೂನನ್ನು ಅಖಿಲಭಾರತವು ವಿಮಾ ನೌಕರರ ಸಂಘವು ಮೊದಲು ಕಲ್ಕತ್ತಾ ನ್ಯಾಯಾಲಯದಲ್ಲೂ ಆ ಬಳಿಕ

[7ನೇ ಪುಟ ನೋಡಿ]

ರೈತರ ಜಾಥಾ ಹೊಸ ದಾಖಲೆ

ಎನ್. ಕೆ. ಉಪಾಧ್ಯಾಯ

ಜನವರಿ 21. ಬಿಜಾಪುರ ನಗರದಲ್ಲಿ ಸಡಗರ. ಬಸವೇಶ್ವರ ಚೌಕಿನಲ್ಲಿ ಜನಸಂದಣಿ. ಕೆಂಪು-ತಿರಂಗಿ ಧ್ವಜಗಳು ಹಾರಾಡುವ ದೃಶ್ಯ. ಕೆಲವರಿಗೆ ಕಂಬಳಿ ಹೆಗಲಲ್ಲಿ. ಕೆಲವರಿಗೆ ತಲೆಯ ಮೇಲೆ ಪಟಗಾ. ಇನ್ನೂ ಕೆಲವರಿಗೆ ಟೊಪ್ಪಿಗೆ. ಕೈಯಲ್ಲಿ-ಹೆಗಲಲ್ಲಿ ಚೀಲಗಳು, ಬಡಿಗೆಗಳು, "ಚಲೋ ಚಲೋ ಬೆಂಗ್ಳೂರು ಚಲೋ" "ರೈತರ ಜಾಥಾಕ್ಕೆ ಜಯವಾಗಲಿ" "ಪ್ರಜಾಪ್ರಭುತ್ವ ಜನತಂತ್ರರಂಗಕ್ಕೆ ಜಯವಾಗಲಿ" ಘೋಷಣೆಗಳ ಮೇಲೆ ಘೋಷಣೆಗಳು. ಮಧ್ಯಾಹ್ನ 1ಗಂಟೆಗೆ 50ಕ್ಕೂ ಮೇಲ್ಪಟ್ಟು ರೈತರು ಸಾಲಾಗಿ ನಿಂತಾಗ, ನೂರಾರು ನೂಲಿನ ಗಿರಣಿ ಕೆಲಸಗಾರರು ರೊಟ್ಟಿಬುಟ್ಟಿಗಳನ್ನು ಹೊತ್ತುಕೊಂಡು ಜಯಘೋಷ ಮಾಡುತ್ತ ರೈತರ ಜಾಥಾಕ್ಕೆ ಹಾರ್ದಿಕ ಬೀಳ್ಕೊಡುವ ದೃಶ್ಯ ಹೃದಯಂಗಮವಾಗಿತ್ತು. ರೈತ-ಕಾರ್ಮಿಕರ ಐಕ್ಯತೆಯ ಪ್ರತೀಕವಾಗಿತ್ತು. ಎರಡು ಮೈಲು ಊರ ಗಡಿದಾಟುವವರೆಗೂ ಕಾರ್ಮಿಕರೂ ಸಾರ್ವಜನಿಕರೂ ಘೋಷಣೆಗಳಿಂದ ಗಗನಚುಂಬಿಸಿ ರೈತಜಾಥಾವನ್ನು ಬೀಳ್ಕೊಟರು.

ಜಾ. 16ರಂದು ನರಗುಂದ-ನವಲಗುಂದದ ರೈತರು ಹುತಾತ್ಮ ಜ್ಯೋತಿಯೊಂದಿಗೆ ಪಾದಯಾತ್ರೆಯಲ್ಲಿ ಬೆಂಗಳೂರಿಗೆ ಹೊರಟಿದ್ದು, ಈ ಜಾಥಾಗೆ ಬೆಂಬಲತೋರಿಸಲು ರಾಜ್ಯಾದ್ಯಂತ ರೈತರ ಜಾಥಾ ಹೊರಡಿಸಬೇಕೆಂದು 4 ವಿರೋಧಿ ಪಕ್ಷಗಳ ಪ್ರಜಾಪ್ರಭುತ್ವ ಜನತಂತ್ರರಂಗದ ರೈತ-ಕಾರ್ಮಿಕರ ಹೋರಾಟ ಸಮಿತಿ ಕರೆಕೊಟ್ಟಿದ್ದು, ಆ ಕರೆಯ ಮೇರೆಗೆ ಬಿಜಾಪುರ ಜಿಲ್ಲೆಯಿಂದಲೂ ರೈತ ಜಾಥಾ ಹೊರಡಿಸುವ ನಿರ್ಣಯ ಕೈಗೊಳ್ಳಲಾಗಿತ್ತು. ಪ್ರಾರಂಭದಲ್ಲಿ ಜನತಾಪಾರ್ಟಿ ಬೆಂಬಲಕೊಟ್ಟಿದ್ದರೂ, ರಾಜ್ಯಸಮಿತಿಯ ಆದೇಶದ ಮೇರೆಗೆ ಕೊನೆಗಳಿಗೆಯಲ್ಲಿ ಜಾಥಾದಲ್ಲಿ ಭಾಗವಹಿಸದಿದ್ದರೂ ಕೂಡ. ಹಳ್ಳಿಯಿಂದ ಬಂದ ಅವರ ಬೆಂಬಲಿಗರು ಜಾಥಾದಲ್ಲಿ ಭಾಗವಹಿಸಿದ್ದರು.

ಚಿಂತಾಮಣಿ-ಶಿವಮೊಗ್ಗದಲ್ಲಿ ನಡೆದ ಗೋಲಿಬಾರಿನ ಹಿನ್ನೆಲೆಯಲ್ಲಿ ನಮ್ಮ ಜಾಥಾ ಹೊರಟಿತ್ತು. ಬೆಂಗಳೂರಿನಲ್ಲಿ ಪೋಲೀಸರ ಗುಂಡಿಗೆ ತುತ್ತಾಗಬಹುದೆಂದು ತಿಳಿದೇ ರೈತರು ಜಾಥಾದಲ್ಲಿ ಭಾಗವಹಿಸಿದ್ದರು. ಗುಂಡಿಗೆ ತುತ್ತಾದರೂ ಚಿಂತೆಯಿಲ್ಲ ರೈತರ ಸಮಸ್ಯೆಗಳನ್ನು ವಿಧಾನ ಸೌಧಕ್ಕೆ ಕಲ್ಪಿಸಬೇಕೆಂಬ ಮಹಾ ಉದ್ದೇಶದಿಂದಲೇ ಬಿಜಾಪುರದಿಂದ ಬೆಂಗಳೂರಿನ ವರೆಗೆ 580 ಕಿಲೋ ಮೀಟರ್ ದೂರದ ಪಾದಯಾತ್ರೆ ಕೈಗೊಳ್ಳಲು ನಿರ್ಧರಿಸಲಾಗಿತ್ತು.

ಬಿಜಾಪುರ ಜಿಲ್ಲೆಯ 3 ತಾಲ್ಲೂಕು, ರಾಯಚೂರು ಜಿಲ್ಲೆಯ ಲಿಂಗಸನೂರ, ಮಸ್ಕಿ, ಸಿಂಧನೂರ, ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ಬಳ್ಳಾರಿ, ಮೊಳಕಾಲ್ಮುರಿ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರ, ಸಿರಾ, ತುಮಕೂರು ಜಿಲ್ಲೆ ಬೆಂಗಳೂರು ಜಿಲ್ಲೆಗಳ ಹಳ್ಳಿಗಳಲ್ಲಿ ಈ ಪಾದಯಾತ್ರೆ ಪ್ರವಾಸಮಾಡಿತು. ಬಿಜಾಪುರ, ರಾಯಚೂರ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳ 36ಹಳ್ಳಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮೆರವಣಿಗೆ, ಸಭೆ ಮಾಡಿ ರೈತರ ಸಮಸ್ಯೆಗಳ ಕುರಿತು ಪ್ರಚಾರಮಾಡಲಾಯಿತು. 30ರಂದು ರಾತ್ರಿ ತಾವರಗೆರೆಯಲ್ಲಿ ನರಗುಂದದ ಮುಖ್ಯ ಜಾಥವನ್ನು ಸೇರಿಕೊಳ್ಳಲಾಯಿತು.

ಬಿಜಾಪುರ ಜಿಲ್ಲೆಬಿಟ್ಟರೆ ಸಿಂದನೂರು, ಬಳ್ಳಾರಿಯಲ್ಲಷ್ಟೆ ನಮಗಿರುವ ಪರಿಚಿತರು. ನಮ್ಮ ಪಾದಯಾತ್ರೆಯ ದಾರಿಯಲ್ಲಿ ನಮ್ಮ ಪರಿಚಯಸ್ಥರು ಯಾರೂ ಇರಲಿಲ್ಲ. ನರಗುಂದ ಹಾಗೂ ಬಿಜಾಪುರ ಜಾಥಾಗಳ ಪ್ರಚಾರ ಸಾಕಷ್ಟಾಗಿತ್ತು. ನಮ್ಮ ಜಾಥಾದ ಪಥವನ್ನು ಕರಪತ್ರಗಳ ಮೂಲಕ ಮುಂಗಡವಾಗಿ ತಿಳಿಯಪಡಿಸಿದ್ದೆವು. ಮುಂದಿನ ಊರಲ್ಲಿ ಪರಿಚಯಮಾಡಿಕೊಂಡು, ಜಾಥಾಕ್ಕೆ ಬೇಕಾದ ಊಟ-ವಸತಿಯ ವ್ಯವಸ್ಥೆ ಸಲುವಾಗಿ ಇಬ್ಬರನ್ನು ಮುಂಗಡ ಪಾರ್ಟಿಯಾಗಿ ಕಳುಹಿಸುತ್ತಿದ್ದೆವು. ರೈತರ ಜಾಥಾ ಬರುತ್ತಿದೆಂಬ ಸುದ್ದಿ ಪೋಲೀಸರಿಂದಲೂ ತಿಳಿಯುತ್ತಿತ್ತೆಂದು ಮುಂದಿನ ಊರವರು ಹೇಳುತ್ತಿದ್ದರು. ಮುಂಗಡ ಪಾರ್ಟಿ ಮುಂದಿನ ಊರು ತಲ್ಪುವುದೇ ತಡ "ನಮ್ಮಲ್ಲಿ ಮೆರವಣಿಗೆ, ಭಾಷಣ ಆಗಲೇಬೇಕು. ಜಾಥಾಕ್ಕೆ ಸುಸ್ವಾಗತ. ಬ್ಯಾಂಡ-ಬಾಜಾ ವ್ಯವಸ್ಥೆಮಾಡುತ್ತೇವೆ. ಊಟ-ವಸತಿಯ ವ್ಯವಸ್ಥೆ ಮಾಡುತ್ತೇವೆ" ಹಾರ್ದಿಕ ಸ್ವಾಗತ ಊರ ಜನರಿಂದ. ನಮಗೆ ಆಶ್ಚರ್ಯ! ಪರಿಚಯವಿಲ್ಲದಿದ್ದರೂ ಕೂಡ ಎಂಥ ವೈಭವದ ಸ್ವಾಗತ ಈ ರೈತಜಾಥಾಕ್ಕೆ. ರೈತರ ಸಮಸ್ಯೆ ಎಷ್ಟು ಗಂಭೀರವಾಗಿದೆ, ಹಳ್ಳಿಗಾಡಿನ ಜನ ಎಂಥ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂಬುದನ್ನು ಇಂಥ ಸ್ವಾಗತ ತೋರಿಸುತ್ತಿತ್ತು. ಅತ್ಯಂತ ಬಡವ ಕೃಷಿಕೂಲಿಗಾರರಿಂದ ಹಿಡಿದು ದೊಡ್ಡ ಭೂಮಾಲಕರವರೆಗೂ ಎಲ್ಲರೂ ಈ ಸ್ವಾಗತದಲ್ಲಿ ಪಾಲುಗಾರರು. ಘೋಷಣೆಯಲ್ಲಿ ಧ್ವನಿಕೂಡಿಸುವವರು. ಊಟ ನೀಡುವುದರಲ್ಲಿ ಕೈಗೆಕೈಕೂಡಿಸುವವರು. ಊಟವಾದ ನಂತರ ತಮ್ಮ ಸಂಕಷ್ಟಗಳನ್ನು ತೋಡಿಕೊಳ್ಳುವವರು. ಎಂಥ ದೃಶ್ಯ, ಎಂಥ ಅನುಭವ.

ಲಿಂಗಸಗೂರ, ಸಿಂದನೂರ, ಚಳ್ಳಕೆರೆ ಮೊದಲಾದ ಊರ ಮುಖಂಡರಿಂದ ತಕರಾರು. ಎರಡು ದಿವಸ ಮುಂಚಿತವಾಗಿ ತಿಳಿಸುತ್ತಿದ್ದರೆ, ನೆರೆಕೆರೆಯ ಹಳ್ಳಿಜನರನ್ನೂ ಕರೆಯುತ್ತಿದ್ದೆವು. ಅವಕಾಶ ಸಿಗಲಿಲ್ಲೆಂದು ಸಂತಾಪ.

ಮಸ್ಕಿಯಲ್ಲಿ ಮಧ್ಯಮ ರೈತ, 15 ವರ್ಷದಿಂದ ಆಂಧ್ರದಿಂದ ಬಂದು, ತುಂಗಭದ್ರಾ ಅಯಕಟ್ಟು ಹಳ್ಳಿಯಲ್ಲಿ ನೆಲೆಸಿರುವ ರಾಮಚಂದ್ರ ರಾವ್ ಅವರ ತಕರಾರು. "ನನಗೆ 25 ಎಕರೆ ಭೂಮಿ ಇರುತ್ತದೆ. ಗೊಬ್ಬರದ ಬೆಲೆ ಜಾಸ್ತಿ, ಭತ್ತದ ಬೆಲೆ ಕಡಿಮೆ. ಭೂಮಿಯ ಉತ್ಪನ್ನದಿಂದ ಸಂಸಾರಸಾಗುವುದಿಲ್ಲ. ಆದ್ದರಿಂದ ಕಳೆದೆರಡು ವರ್ಷಗಳಿಂದ ರಸಾಯನಿಕ ಗೊಬ್ಬರದ ಅಂಗಡಿ ತೆಗೆದಿದ್ದೇನೆ" ಉಪಾಯವಿಲ್ಲೆಂದು ಅವರ ವಾದ.

ಶ್ರೀಮತಿ ಬಸವರಾಜೇಶ್ವರಿಯವರ ಊರು ತುಂಗಭದ್ರಾ ನದಿ ದಂಡೆಯಲ್ಲಿರುವ ದಡೆಸಗೂರು. ಬಸವರಾಜೇಶ್ವರಿಯವರ ಮೈಸೂರಿನ ಜಹಗೀರದಾರ ಅವರ ಹೆಂಡತಿ ಬಿಜಾಪುರ ಜಿಲ್ಲೆಯವರು. ತಮ್ಮ ತವರೂರಿಂದ ರೈತರು ಬಂದಿದ್ದಾರೆಂಬ ಹೆಮ್ಮೆಯಿಂದ ಪಾಪ ಜಹಗೀರದಾರರ ಪತ್ನಿ ಅತ್ಯುತ್ಸಾಹದಿಂದ 2 ಘಂಟೆಯೊಳಗಾಗಿ ಜೋಳದ ರೊಟ್ಟಿ, ಚಟ್ನಿ, ಅನ್ನ, ಸಾರುಮಾಡಿ 70 ಪಾದಯಾತ್ರಿಗಳ ಹೊಟ್ಟೆ ತಣಿಸಿದಳು. ನಾನು ಅಡಿಗೆ ಮನೆಗೆ ಹೋದಾಗ ಈ ಮಹಾತಾಯಿ ತನ್ನ ಗೆಳತಿಯ ಜೊತೆಯಲ್ಲಿ ರೊಟ್ಟಿ ಬಡಿಯುತ್ತಿರುವುದನ್ನು ಕಂಡು ನನ್ನ ಹೃದಯ ತುಂಬಿಬಂತು. ತುಂಗಭದ್ರೆಯಲ್ಲಿ ಸ್ನಾನ ಮಾಡಿ, ಬಿಸಿ ರೊಟ್ಟಿ, ಅನ್ನ ಉಂಡು ಮುಂದೆ ಸಾಗುತ್ತಿದ್ದಂತೆಯೇ ಸಿರಗುಪ್ಪದಿಂದ ತರುಣ ಸಂಘದವರು ಕಾರಿನಲ್ಲಿ ಬಂದು "ನಮ್ಮಲ್ಲಿ ಮೆರವಣಿಗೆ, ಭಾಷಣ, ಚಹಾ ಮುಗಿಸಿ" ಮುಂದಿನ ಊರಿಗೆ ಪ್ರಯಾಣವೆಂದು ಒತ್ತಾಯ ಮಾಡಿದ್ದರಿಂದ, ಆ ಕಾರ್ಯಕ್ರಮ ಮುಗಿಯುವಷ್ಟರಲ್ಲೇ ಚಕ್ಕಲ ಕೋಟಿಯ ಹಿರಿಯರಿಂದ ರಾತ್ರಿ ವ್ಯವಸ್ಥೆಯ ಆಮಂತ್ರಣ. ಬಳ್ಳಾರಿಯ ನಂತರ 7 ಮೈಲು ಆಂಧ್ರ ಪ್ರದೇಶದಲ್ಲಿ ನಮ್ಮ ಪ್ರಯಾಣ. ಆಂಧ್ರಪ್ರದೇಶದ ಹಿರೆಹಾಳ, ಆಲಕುಂದಿಯಲ್ಲೂ ನಮಗೆ ಸ್ವಾಗತ-ಊಟೋಪಚಾರ. ಆ ಹಳ್ಳಿಗರ ಭಾಷೆ ಕನ್ನಡ, ಶಿಕ್ಷಣ ಕನ್ನಡ, ಸಂಸ್ಕೃತಿ ಕನ್ನಡ, ಆದರೆ ಆಂಧ್ರ ಪ್ರಾಂತ. ಹೀರೆಹಾಳದಿಂದ ರಾತ್ರಿ ಊಟಮಾಡಿ ಮೊಳಕಾಲ್ಮುರಿ ತಾಲೂಕಿನ ರಾಮಪುರಕ್ಕೆ ಹೋದಾಗ ರಾತ್ರಿ 11 ಗಂಟೆಗೆ ನಮ್ಮನ್ನೆದುರ್ಗೊಳ್ಳಲು ಸಾವಿರಾರು ಜನ. "ಈಗ ಭಾಷಣ ಆಗಬೇಕು. ಮುಂಜಾನೆ ಹಲಗೆ-ಬ್ಯಾಂಡ್ ಬರುತ್ತದೆ. ಮೆರವಣಿಗೆ-ಭಾಷಣ. ಮುಂಜಾನೆ ಟಿಫಿನ್ ಕೇಸರಿಭಾತ್-ಉಪ್ಪಿಟ್ಟು. 11 ಗಂಟೆಗೆ ಹೊಟ್ಟೆ ತುಂಬ ಊಟ ಮಾಡಿ ಬಿ.ಜಿ. ಕೆರೆಗೆ ಪ್ರಯಾಣ", ಊರ ಹಿರಿಯ ಕರಕಪ್ಪನವರ ಆಜ್ಞೆ. ಮಾಜಿ ಎಂ.ಎಲ್.ಎ. ಎಸ್. ಎಚ್. ಬಸಣ್ಣನವರು ಅದಕ್ಕೆ ರಾಗ ಜೋಡಿಸಿದರು. ನಮಗೆ ಮುಂದೆ ಗತಿಯಿಲ್ಲ. ನಮ್ಮಿಂದ ಆಜ್ಞೆಪಾಲನೆ. ವೈಭವದ ಕಾರ್ಯಕ್ರಮ. ಅದರಲ್ಲಿ ಇಂದಿರಾಗಾಂಗ್ರೆಸ್ಸಿನವರದ್ದೂ ಪಾಲು. ಸಮಸ್ಯೆಗಳು ಯಾವಾಗಲೂ ಬರಗಾಲ. ಬೆಳೆಯಿಲ್ಲ, ಕೂಲಿಯಿಲ್ಲ. ನೀರಾವರಿ ಯೋಜನೆಯಿಲ್ಲ. ಬರಗಾಲ ಕಾಮಗಾರಿಯಿಲ್ಲ. ಮಂತ್ರಿಗಳ ಬರೇ ಆಶ್ವಾಸನೆಗಳು, ಕಾರ್ಯರೂಪದಲ್ಲಿ ಎಲ್ಲ ಸೊನ್ನೆ.

ರಾತ್ರಿ ಚಳ್ಳಕೆರೆ ತಾಲೂಕಿನ ಬಿ.ಸಿ. ಕೆರೆಯಲ್ಲಿ ವಾಸ. ರಾಮಾಂಜನಪ್ಪ, ವೀರಭದ್ರಪ್ಪನವರ ಉತ್ಸಾಹವೇ ಉತ್ಸಾಹ. ನಮ್ಮೆಲ್ಲರಿಗಿಂತ ಗಟ್ಟಿಯಾಗಿ ಅವರದ್ದೇ ಘೋಷಣೆ. ವೀರಭದ್ರಪ್ಪನವರು ಒಕ್ಕಲತನ ಡಿಗ್ರಿ ಪಡೆದವರು. ದೊಡ್ಡ ಭೂಮಾಲಕ. ಮೆರವಣಿಗೆ, ಭಾಷಣ ಮುಗಿಯುವಾಗ ನಮಗೂ-ಪೋಲೀಸರಿಗೂ ಉತ್ತಮ ಊಟದ ವ್ಯವಸ್ಥೆ ತಮ್ಮ ಮನೆಯಲ್ಲಿ ದೊಡ್ಡ ಭೂಮಾಲಕರೂ ರೈತ ಜಾಥಾಕ್ಕೆ ಯಾಕೆ ಬೆಂಬಲ ಕೊಡುತ್ತಿದ್ದಾರೆ? ವೀರಭದ್ರಪ್ಪನವರ ಉತ್ತರ "ನನ್ನ 3 ಭಾವಿಯಲ್ಲಿ ನೀರಿಲ್ಲ. ತೆಂಗು ಮರ. ಬೆಳೆ ಒಣಗುತ್ತಿದೆ. ಮತ್ತೊಂ ಬೋರ್‌ವೆಲ್ ನನ್ನ ಖರ್ಚಿನಿಂದಲೇ ತೆಗೆದಿದ್ದೇನೆ. 6 ತಿಂಗಳಾದರೂ ಕೆ.ಇ.ಬಿ.ಯವರು ನನಗೆ ವಿದ್ಯುಚ್ಛಕ್ತಿ ಜೋಡಿಸಿಕೊಟ್ಟಿಲ್ಲ. ಇದೆಂಥ ಸರ್ಕಾರ. ನಾವು ನಿಮಗೆ ಬೆಂಬಲ ಕೊಡದೆ ಮತ್ತೆಯಾರು ಕೊಡಬೇಕು ಹೇಳಿ". ವೀರಭದ್ರಪ್ಪನವರ ಒಲವು ಬಿಜೆಪಿ ಪಾರ್ಟಿಗೆಂದು ತಿಳಿಯಿತು. ಚಳ್ಳಕೆರೆಯಲ್ಲಿ ಆರ್. ರಾಜಣ್ಣ ನಾಯಕರಿಗೂ ಲಾರಿ ಡ್ರೈವರ-ಕ್ಲೀನರ ಯೂನಿಯನವರಿಗೂ ಅತಿ ಉತ್ಸಾಹ. ಒಂದು ಗಂಟೆಯಲ್ಲೆ ರೂ. 500 ಕೂಡಿಸಿ, ಎರಡು ಊಟ, ಚಹಾ, ಮೆರವಣಿಗೆ, ಮೀಟಿಂಗಿನ ವ್ಯವಸ್ಥೆ. ಅಲ್ಲದೇ ರಾತ್ರಿ ವೇಳೆಯಲ್ಲೇ ನರಗುಂದ ಜಾಥಾವನ್ನು ತಾವರೆಗೆರೆಯಲ್ಲಿ ಸೇರಿಕೊಳ್ಳುವ ವ್ಯವಸ್ಥೆ. "ನರಗುಂದ ಜಾಥಾದ ಸಲುವಾಗಿ ಮೊನ್ನೆ ಚಿತ್ರದುರ್ಗದಿಂದ 8 ಚೀಲ ಅಕ್ಕಿಕಳುಹಿಸಿದ್ದೆ. ಅವರೂ ಚಿಂತೆಯಿಲ್ಲ. ನಿಮಗೂ ಸನ್ಮಾನ ಮಾಡುತ್ತೇವೆ. ಬನ್ನಿ" ರಾಜಣ್ಣ ನಾಯಕರ ಉತ್ಸಾಹದ ಮಾತಿದು.

ಬಿಜಾಪುರ ಜಿಲ್ಲೆಯಂತೆಯೇ ನಮ್ಮ ತಾಲ್ಲೂಕು ಕೂಡ ಬರಗಾಲ ಪ್ರದೇಶ. ಬರಗಾಲ ನಿವಾರಣೆಗೆ ಯಾವ ಕಾರ್ಯಕ್ರಮವಿಲ್ಲ. ಹೋರಾಟ ಒಂದೇ ದಾರಿ. ಇಂಥ ಜಾಥಾ ಕಾರ್ಯಕ್ರಮ ಸತತವಾಗಿ ನಡೆಯುತ್ತಿರಬೇಕು. ಆಗ ಮಾತ್ರ ಸರ್ಕಾರ ಕಣ್ಣು ತೆರೆದೀತು. ರಾಜಣ್ಣ ನಾಯಕರ ಉದ್ಗಾರವಿದು!

ಬರಗಾಲ ಪ್ರದೇಶ, ನೀರಾವರಿ ಪ್ರದೇಶ; ಹತ್ತಿ ಜೋಳ, ಕಬ್ಬು, ಭತ್ತದ ಬೆಳೆಗಳ ಪ್ರದೇಶ. ಶ್ರೀಮಂತ ರೈತ, ಮಧ್ಯಮ ರೈತ, ಬಡರೈತ, ಕೃಷಿ ಕಾರ್ಮಿಕ-ಎಲ್ಲರಿಗೂ ಹಲವಾರು ಸಮಸ್ಯೆಗಳು. ಸ್ವಾತಂತ್ರ್ಯ ದೊರೆತ 32 ವರ್ಷಗಳಲ್ಲಿ ಆ ಸಮಸ್ಯೆಗಳಿಗೆ ಪರಿಹಾರವಿಲ್ಲ. "ಹೋರಾಟ ಮಾಡಲೇ ಬೇಕು" ಎಂಬುದೊಂದೇ ಎಲ್ಲರ ಬಾಯಲ್ಲೂ ಕೇಳಿಬರುವ ಮಾತು. "ಯೋಗ್ಯ ಮಾರ್ಗದರ್ಶನ ಕೊಡಿ" "ಸಂಘಟನೆ ಬೆಳೆಸಿ" ಎಂಬ ಸಲಹೆಗಳು.

ಮಂಗಳೂರಿನಿಂದ, ಕೋಲಾರದಿಂದ ಬೆಂಗಳೂರಿಗೆ ಈ ಹಿಂದೆ ರೈತ ಸಂಘದಿಂದ ಪಾದಯಾತ್ರೆಗಳು ನಡೆಸಲ್ಪಟ್ಟಿದ್ದವು. ರೈತನೇ ಭೂಮಿಯ ಒಡೆಯನಾಗಬೇಕು, ಭೂಸುಧಾರಣೆ ಕಾಯಿದೆಜ್ಯಾರಿಯಲ್ಲಿ ತರಬೇಕು. ಸರ್ಕಾರಿ ಪಡಭೂಮಿ ಭೂಹೀನರಿಗೆ ಹಂಚಬೇಕು ಮೊದಲಾದ ಪ್ರಮುಖ ಬೇಡಿಕೆಗಳು ಆ ಜಾಥಾಗಳದ್ದು. ರೈತ ಸಮೂಹದ ಒಂದು ಗುಂಪು ಆ ಜಾಥಾಗಳಿಗೆ ಬೆಂಬಲವಾಗಿ ನಿಂತಿತ್ತು.

ನರಗುಂದ-ನವಲಗುಂದ, ಬಿಜಾಪುರ ಮತ್ತಿತರ ಪ್ರದೇಶಗಳಿಂದ ಹೊರಟ ಈ ಜಾಥಾ ಬರೇ ಭೂಸುಧಾರಣೆಯನ್ನಷ್ಟೇ ಹಮ್ಮಿಗೊಳ್ಳದೆ, ಗೋಲಿಬಾರಿನ ಹಿನ್ನೆಲೆಯಲ್ಲಿ ರೈತರ ಮೇಲೆ ಹಾಕಲ್ಪಟ್ಟ ಖಟ್ಲೆಗಳ ವಾಪಸಾತಿ, ಬೆಳೆಗಳಿಗೆ ಯೋಗ್ಯಬೆಲೆ, ಸಾಲರದ್ದತಿ, ಶೇ. 4ರ ಬಡ್ಡಿಯಲ್ಲಿ ಸಾಲ ಮಂಜೂರಾತಿ, ಬರಗಾಲ ಪರಿಹಾರ, ರೂ. 10 ಕನಿಷ್ಟ ಕೂಲಿ ಮೊದಲಾದ ಬಹುಸಂಖ್ಯಾತ ರೈತರ ಸಮಸ್ಯೆಗಳನ್ನು ಅಳವಡಿಸಿಕೊಂಡು ವಿಶಾಲ ತಳಹದಿಯ ಮೇಲೆ ಸಂಘಟಿಸಲ್ಪಟ್ಟಿತ್ತು. ಈ ಕಾರಣದಿಂದಲೇ ಬಿಜೆಪಿ, ಜನತಾಪಾರ್ಟಿಗಳು ಬಹಿರಂಗವಾಗಿ ಈ ಜಾಥಾದಲ್ಲಿ ಭಾಗವಹಿಸದಿದ್ದರೂ, ಪ್ರತಿಯೊಂದು ಊರಲ್ಲಿ ಕೂಡ ಬಿಜೆಪಿ, ಜೆಪಿ ಪಾರ್ಟಿಯವರಲ್ಲದೆ ಇಂದಿರಾ ಕಾಂಗ್ರೆಸ್ಸಿನವರು ಕೂಡ ಈ ಜಾಥಾಕ್ಕೆ ಮನಃಪೂರ್ವಕವಾಗಿ ಸಹಾಯಮಾಡಿ ಬೆಂಬಲ ವ್ಯಕ್ತಮಾಡಿದರು. ಆರ್ಥಿಕ ಸಹಾಯ ನೀಡಿದರು.

ಬಂಡವಾಳಶಾಹಿ ಸಮಾಜದ ಬದಲಾವಣೆಗೆ ರೈತ-ಕಾರ್ಮಿಕ ಐಕ್ಯತೆ ಅತ್ಯವಶ್ಯವಾಗಿರುವುದರಿಂದ, ಇಷ್ಟೂ ವರ್ಷ ಪ್ರತ್ಯೇಕವಾಗಿಯೇ ಹೋರಾಟ ನಡೆಸುತ್ತಿದ್ದ ರೈತ-ಕಾರ್ಮಿಕರು ಈಸಲ ಹೆಗಲಿಗೆ ಹೆಗಲುಕೊಟ್ಟು ಜೊತೆಯಾಗಿ ಮತಪ್ರದರ್ಶನಮಾಡಿ ರೈತ-ಕಾರ್ಮಿಕ ಐಕ್ಯತೆಯ ನಾಂದಿ ಹಾಕಿ ತೋರಿಸಿದರು. ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಇದೊಂದು ಹೊಸ ತಿರುವು. ಈ ಪಾದಯಾತ್ರೆಯಿಂದ ಉದ್ಭವಿಸಿದ ಹೊಸ ಜಾಗ್ರ

(7ನೇ ಪುಟ ನೋಡಿ)

ಕಾರ್ಮಿಕರ ಮೂಲ ಹಕ್ಕುಗಳಿಗೆ ಕೊಡಲಿಯೇಟು ಹಾಕುವ ಎಲ್.ಐ.ಸಿ. ಸುಗ್ರೀವಾಜ್ಞೆ

(5ನೇ ಪುಟದಿಂದ)

ಸರ್ವೋನ್ನತ ನ್ಯಾಯಾಲಯದಲ್ಲೂ ಪ್ರಶ್ನಿಸಿ ಗೆದ್ದ ಕಾರಣ ಎಲ್ಲೈಸಿ ನೌಕರರಿಗೆ 1975-76, 1976-77 ಮತ್ತು 1977-78ರ ವರ್ಷಗಳಿಗೆ 15%ರಂತೆ ಬೋನಸ್ ಲಭಿಸಿತು. ಆಗ ಅಧಿಕಾರದಲ್ಲಿದ್ದ ಜನತಾ ಸರ್ಕಾರ ಮತ್ತು ಎಲ್ಲೈಸಿಯ ಆಡಳಿತೆಗಳು ಇದರಿಂದ ಹತಾಶರಾಗಿ ಕೈಗಾರಿಕಾ ವಿವಾದ ಕಾಯ್ದೆಯ 19(2) ಕಲಮಿನ ಪ್ರಕಾರ ನೌಕರರ ಒಪ್ಪಂದವನ್ನು ಕೊನೆಗೊಳಿಸುವ ನೋಟೀಸನ್ನು ನೀಡಿದವು. ಇದನ್ನನುಸರಿಸಿ 1974ರ ಒಪ್ಪಂದದಲ್ಲಿನ ಬೋನಸ್‌ಗೆ ಸಂಬಂಧಪಟ್ಟ ಪರಿಚ್ಛೇದವನ್ನು ರದ್ದುಪಡಿಸುವ ನೋಟೀಸನ್ನೂ ಕೈಗಾರಿಕಾ ವಿವಾದ ಕಾಯ್ದೆಯ 9(A) ಕಲಮಿನನ್ವಯ ನೀಡಲಾಯಿತು. ಹಾಗೂ ಎಲ್.ಐ.ಸಿ. ಆಕ್ಟ್‌ನ 11(2)ನೇ ಕಲಮಿನ ದುರುಪಯೋಗಪಡೆದು ಜೀವವಿಮಾ ನೌಕರರ ಸೇವಾ ನಿಯಮಗಳಲ್ಲಿನ ಸಂಬಂಧಪಟ್ಟ ಪರಿಚ್ಛೇದವನ್ನೂ ತಿದ್ದುಪಡಿ ಮಾಡಿ ಗೆಜೆಟ್ ಮಾಡಿಸಲಾಯಿತು. ಈ ಕ್ರಮಗಳ ಔಚಿತ್ಯವನ್ನು ಪ್ರಶ್ನಿಸಿ ನೌಕರರ ಸಂಘಟನೆಗಳು ಕಲ್ಕತ್ತಾ ಮತ್ತು ಅಲಹಾಬಾದ್ ನ್ಯಾಯಾಲಯಗಳಲ್ಲಿ ರಿಟ್ ಅರ್ಜಿ ಸಲ್ಲಿಸಿದವು. ಅಲಹಾಬಾದ್ ನ್ಯಾಯಾಲಯದ ಲಕ್ನೋ ನ್ಯಾಯಪೀಠ ನೌಕರರವಾದವನ್ನು ಎತ್ತಿಹಿಡಿಯಿತು. ಈ ತೀರ್ಪಿನ ವಿರುದ್ಧ ಎಲ್ಲೈಸಿ ಮತ್ತು ಕೇಂದ್ರ ಸರ್ಕಾರಗಳು ಸರ್ವೋನ್ನತ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮನವಿ ಮತ್ತು ಅಖಿಲಭಾರತ ವಿಮಾ ನೌಕರರ ಸಂಘವು ಕಲ್ಕತ್ತಾ ಹೈಕೋರ್ಟಿನಲ್ಲಿ ಮೊದಲು ಸಲ್ಲಿಸಿದ್ದ, ಆ ಬಳಿಕ ವರಿಷ್ಠ ನ್ಯಾಯಾಲಯಕ್ಕೆ ವರ್ಗಾಯಿಸಿಕೊಂಡ ರಿಟ್ ಅರ್ಜಿಗಳ ಕುರಿತು ಎರಡು ವರ್ಷಕಾಲ ವಿಚಾರಣೆ ನಡೆಸಿದ ಸುಪ್ರೀಂಕೋರ್ಟಿನ ನ್ಯಾಯಪೀಠ ತಾ. 10-11-1980ರ ನೌಕರರವಾದವನ್ನು ಎತ್ತಿ ಹಿಡಿದು ಬಹುಮತದ ತೀರ್ಪಿತ್ತಿತು. ನ್ಯಾಯಾಲಯದ ಈ ತೀರ್ಮಾನವನ್ನು ಅಲಕ್ಷ್ಯ ಮಾಡಿ ಅದನ್ನು ಜ್ಯಾರಿಯಾಗದಂತೆ ಮಾಡುವುದೇ ಸರ್ಕಾರ ಇದೀಗ ಹೊರಡಿಸಿರುವ ಸುಗ್ರೀವಾಜ್ಞೆಯ ಉದ್ದೇಶ ಹೀಗೆ ಜೀವವಿಮಾ ನೌಕರರು ಕೇವಲ ಬೋನಸ್ಸಿಗಾಗಿ ಮಾತ್ರ ಹೋರಾಡುತ್ತಿಲ್ಲ; ಅವರ ಹೋರಾಟ ಬಿಳಿ ಕಾಲರಿನ ನೌಕರರನ್ನು ನೀಲಿ ಕಾಲರಿನ ಕಾರ್ಮಿಕರಿಂದ ಪ್ರತ್ಯೇಕಗೊಳಿಸಲು ಸರ್ಕಾರ ನಡೆಸುತ್ತಿರುವ ಪ್ರಯತ್ನದ ವಿರುದ್ಧ, ವಿಮಾ ನೌಕರರು ದಶಕಗಳ ಕಾಲ ಹೋರಾಡಿ ಗಳಿಸಿದ ಸವಲತ್ತುಗಳನ್ನು ಉಳಿಸಿಕೊಳ್ಳುವ ಸಲುವಾಗಿ ಮತ್ತು ನ್ಯಾಯಾಲಯಗಳ ನಿರ್ದೇಶಗಳನ್ನು ಕಾಲಕಸದಂತೆ ಕಾಣುತ್ತಿರುವ ಸರ್ಕಾರದ ನೀತಿಯ ವಿರುದ್ಧ ಹಾಗೂ ನ್ಯಾಯಾಂಗದ ಸ್ವಾಯತ್ತತೆ ಮತ್ತು ಕೈಗಾರಿಕಾ ವಿವಾದ ಕಾನೂನು ಕಾರ್ಮಿಕರಿಗೆ ನೀಡಿರುವ ಅಲ್ಪಸ್ವಲ್ಪ ಸವಲತ್ತುಗಳ ರಕ್ಷಣೆಗಾಗಿ ನಡೆಯುತ್ತಿರುವ ಹೋರಾಟವೆಂಬುದನ್ನು ಗಮನಿಸಬೇಕು. ಈ ಹೋರಾಟ ಬರಿಯ ಎಲ್.ಐ.ಸಿ. ನೌಕರರ ಹೋರಾಟವಲ್ಲ. ಎಲ್.ಐ.ಸಿ. ನೌಕರರು ಎದುರಿಸುತ್ತಿರುವ ಸಮಸ್ಯೆಗಳನ್ನೇ ಸಾಮಾನ್ಯ ವಿಮಾ ನೌಕರರೂ ಎದುರಿಸಿ ಹೋರಾಡುತ್ತಿದ್ದಾರೆ. ಇಂದು ದೇಶದ ಕಾರ್ಮಿಕ ವರ್ಗವಲ್ಲ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಹೋರಾಟ, ಮತ್ತು ಲೋಕೋ ಸಿಬ್ಬಂದಿಯ ಮುಷ್ಕರದಂತೆ ವಿಮಾ ನೌಕರರು ನಡೆಸುತ್ತಿರುವ ಹೋರಾಟವನ್ನು ಆಸಕ್ತಿಯಿಂದ ಗಮನಿಸುತ್ತಿದೆ. ವಿಮಾ ನೌಕರರ ಚಳುವಳಿ ಸಮಗ್ರ ಕಾರ್ಮಿಕವರ್ಗದ ಪ್ರಾತಿನಿಧಿಕ ಚಳುವಳಿಯಾಗಿದೆ. ಏಕೆಂದರೆ ನ್ಯಾಯಾಂಗದ ಸ್ವಾತಂತ್ರ್ಯ, ಕಾರ್ಮಿಕರ ಕಲ್ಯಾಣ ಮುಂತಾದ ದೊಡ್ಡ ದೊಡ್ಡ ಮಾತುಗಳನ್ನಾಡುವ ಸ್ವಾಮ್ಯವರ್ಗ ಹಾಗೂ ಅದನ್ನು ಪ್ರತಿನಿಧಿಸುವ ಸರ್ಕಾರದ ಆತ್ಮವಂಚಕ ಪ್ರವೃತ್ತಿ ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯನ್ನು ಅಲಂಕರಿಸಿರುವ ಎಲ್ಲ ಮೌಲ್ಯಗಳ ಪೊಳ್ಳುತನವನ್ನು ವಿಮಾ ನೌಕರರ ಕುರಿತು ಸರ್ಕಾರ ತಳೆದಿರುವ ನಿಲುವು ಬಹಿರಂಗಗೊಳಿಸುತ್ತಿದೆ. ವಿಮಾ ನೌಕರರ ಹೋರಾಟದ ಸೋಲುಗೆಲುವಿನಲ್ಲಿ ಒಟ್ಟು ಕಾರ್ಮಿಕವರ್ಗದ ಸೋಲುಗೆಲುವಿನ ಪ್ರಶ್ನೆ ಅಡಕವಾಗಿದೆ.

ಕಳೆದ ಡಿಸೆಂಬರ ತಿಂಗಳಿನಲ್ಲಿ ಮುಂಬೈನಲ್ಲಿ ನಡೆದ ಅಖಿಲ ಭಾರತ ವಿಮಾ ನೌಕರರ ಸಂಘದ ಹತ್ತನೇ ಸಮ್ಮೇಳನವು ಈ ಎಲ್ಲಾ ವಿದ್ಯಮಾನಗಳನ್ನು ಗಮನಿಸಿ ನೌಕರರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ನ್ಯಾಯಾಲಯದ ಮುಖ ನೋಡುತ್ತಾ ಸುಮ್ಮನಿದ್ದರೆ ಸಾಲದು; ಬದಲು ತಮ್ಮ ಸಂಘಟನಾ ಬಲ ಮತ್ತು ಹೋರಾಟದ ಮಾರ್ಗ ಅನುಸರಿಸುವ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಎಂದು ತೀರ್ಮಾನಿಸಿದೆ ಹಾಗೂ ಸರ್ಕಾರದ ನೀತಿಗೆದುರಾಗಿ ಚಳುವಳಿಯನ್ನು ತೀವ್ರಗೊಳಿಸಲು ಕರೆ ನೀಡಿದೆ. ಎಲ್.ಐ.ಸಿ.ಯಲ್ಲಿರುವ ಎಲ್ಲಾ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳೂ ತಾ. 13-2-1981ರಂದು ಮುಂಬೈಯಲ್ಲಿ ಸಭೆಸೇರಿ ಹೋರಾಟ ಮುಂದುವರಿಸುವ ಮತ್ತು ಅಗತ್ಯವೆನಿಸಿದರೆ ಅನಿರ್ದಿಷ್ಟಾವಧಿಯ ಮುಷ್ಕರ ಹೂಡುವ ತೀರ್ಮಾನವನ್ನು ಕೈಗೊಂಡಿದ್ದಾರೆ. ಕಾರ್ಮಿಕ ವರ್ಗದ ಪಾಲಿಗೆ ನಿರ್ಣಾಯಕವಾಗಿರುವ ವಿಮಾ ನೌಕರರ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ.ಐ.ಟಿ.ಯು. ಮತ್ತು ದೇಶದ ಎಲ್ಲಾ ಪ್ರಮುಖ ಕಾರ್ಮಿಕ ಸಂಘಟನೆಗಳು ಬೆಂಬಲ ಸಾರಿವೆ. ಈ ಹೋರಾಟಕ್ಕೆ ದೇಶದ ಕಾರ್ಮಿಕವರ್ಗ ಒಕ್ಕೊರಲಿನಿಂದ ಬೆಂಬಲ ನೀಡಬೇಕಾದ ಅಗತ್ಯವಿದೆ.

—ಎ. ಎಸ್. ಆಚಾರ್ಯ

ಸಮಾಜವಾದೀ ಪೋಲಂಡಿನ ಬಿಕ್ಕಟ್ಟು

(4ನೇ ಪುಟದಿಂದ)

ರಾಷ್ಟ್ರೀಯ ಸಮಗ್ರತೆಯ ರಕ್ಷಣೆಗಾಗಿ ಕಳೆದ ಮೂವತ್ತೈದು ವರ್ಷಗಳ ಸಮಾಜವಾದೀ ಸಾಧನೆಗಳನ್ನು ಅಸ್ಥಿರಗೊಳಿಸಿ ನಾಶಗೊಳಿಸುವ ಪ್ರಯತ್ನಗಳನ್ನು ನಿಷ್ಪಕ್ಷಗೊಳಿಸಲು ಈ ಸವಾಲನ್ನು ಸ್ವೀಕರಿಸಲೇಬೇಕಾಗುತ್ತದೆ. ವಾಲೆಸಾ ಹಾಗೂ ಆತನ ವೃಂದದಲ್ಲಿ ಜವಾಬ್ದಾರಿ ಭಾವಮೂಡದಿದ್ದರೆ ಅವರು ಪೋಲಂಡಿನ ಸಮಾಜವಾದೀ ಸಾಧನೆಗಳನ್ನು ಮತ್ತು ಸಮಾಜವಾದದ ದಾರಿಯಲ್ಲಿನ ಮುನ್ನಡೆಯನ್ನು ರಕ್ಷಿಸಬೇಕೆಂದು ಪಣತೊಟ್ಟವರಿಂದ ತೀವ್ರ ಕ್ರಮಗಳನ್ನೆದುರಿಸಬೇಕಾಗಬಹುದು.

ಸಾಮ್ರಾಜ್ಯಶಾಹಿಗಳು ಪೂರ್ವ ಯೂರೋಪಿನ ದೇಶಗಳನ್ನು ಸಮಾಜವಾದೀ ವ್ಯವಸ್ಥೆಯಿಂದ ಸೆಳೆದುಕೊಳ್ಳಬೇಕೆಂಬ ತಮ್ಮ ಹಗಲುಗನಸಿನಲ್ಲಿ ಎರಡನೇ ಮಹಾಯುದ್ಧದ ಫಲಿತಾಂಶಗಳನ್ನು ಬದಲಿಸುವ ತಮ್ಮ ಪ್ರಯತ್ನಗಳನ್ನು ಮುಂದುವರಿಸಿದ್ದೇ ಆದಲ್ಲಿ ಅವರ ಈ ಬುಡಮೇಲು ಮಾಡುವ ಮಧ್ಯಪ್ರವೇಶದ ಚಟುವಟಿಕೆಗಳನ್ನು ಎದುರಿಸಿ ನಿಷ್ಫಲಗೊಳಿಸಲು ಸೋವಿಯೆತ್ ಯೂನಿಯನ್ ಹಾಗೂ ಯೂರೋಪಿನ ಇತರ ಎಲ್ಲಾ ಸಮಾಜವಾದೀ ದೇಶಗಳು ಒಂದಾಗಿ ಪ್ರಯತ್ನಿಸಿದರೆ ಆ ಬಗ್ಗೆ ಸಾಮ್ರಾಜ್ಯಶಾಹಿಗಳು ತಮ್ಮನ್ನು ತಾವೇ ದೂಷಿಸಿಕೊಳ್ಳಬೇಕಾಗುತ್ತದೆ.

●

ರೈತರ ಜಾಥಾ ಹೊಸ ದಾಖಲೆ

(6ನೇ ಪುಟದಿಂದ)

ತೆಯನ್ನು ಸರಿಯಾಗಿ ಉಪಯೋಗಿಸಿ ಗ್ರಾಮಾಂತರ ಪ್ರದೇಶದ ಜನರನ್ನು ಸಂಘಟಿಸುವುದು ಅತ್ಯಗತ್ಯ. ಪ್ರಜಾಪ್ರಭುತ್ವ ಶಕ್ತಿಗಳು ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಭಾರತ ಕಮ್ಯುನಿಸ್ಟ್ ಪಾರ್ಟಿ ಹಾಗೂ ಅವುಗಳ ನೇತೃತ್ವದ ರೈತ ಸಂಘಗಳು ಈ ಜವಾಬ್ದಾರಿ ಹೊತ್ತುಕೊಂಡು ಮುನ್ನಡೆಯುವುದು ಅತ್ಯಗತ್ಯ.

"ನಮ್ಮ ಭೂಮಿಗಳನ್ನು ಕಸಿದುಕೊಂಡು ನಮ್ಮನ್ನೆಲ್ಲ ಬೀದಿಪಾಲು ಮಾಡುತ್ತಾರೆ. ಅವರೆಲ್ಲ ಹಿಂಸಾವಾದಿಗಳು" ಎಂದು ಇಂದಿರಾ ಕಾಂಗ್ರೆಸ್ಸಿನವರು ಕಳೆದ 32 ವರ್ಷಗಳಿಂದಲೂ ಕಮ್ಯುನಿಸ್ಟ್ ಪಾರ್ಟಿ ಕುರಿತು ಅಪಪ್ರಚಾರ ಮಾಡುತ್ತಿದ್ದರು. ಈ ಜಾಥಾದಲ್ಲಿ ಕಮ್ಯುನಿಸ್ಟರ ವರ್ತನೆ ನಮ್ಮ ಭ್ರಮೆ ನಿರಸನ ಮಾಡಿದೆ" ಎಂದು ಜಾಥಾದಲ್ಲಿದ್ದ ಇಂದಿರಾ ಕಾಂಗ್ರೆಸ್ಸಿಗರ ಉದ್ಗಾರ. ಈ ದೀರ್ಘ ಜಾಥಾ ಉಂಟುಮಾಡಿದ ಅತಿದೊಡ್ಡ ಪರಿವರ್ತನೆ ಇದಾಗಿದೆ.

●

ಸಿ. ಐ. ಟಿ. ಯು. ನೆರವು

ಲಕ್ಷಕ್ಕಿಂತಲೂ ಹೆಚ್ಚು ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಹೋರಾಟಕ್ಕಿಳಿದು ಸುಮಾರು 55 ದಿನಗಳಾಗಿವೆ. ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳನ್ನು ಕಡೆಗಣಿಸಿ, ದಬ್ಬಾಳಿಯಿಂದ ಮುಷ್ಕರ ಮುರಿಯಲು ಸರ್ಕಾರ ಯತ್ನಿಸುತ್ತಿದೆ. ಹೋರಾಟದ ಅಂಗವಾಗಿ "ರೈಲು ರೋಕೋ" ಚಳುವಳಿಯಲ್ಲಿ ನೂರಾರು ಜನ ಕಾರ್ಮಿಕರನ್ನು ಬಂಧಿಸಿದ್ದಾರೆ. ಬೆಂಗಳೂರಿನ ಬೀದಿಗಳು ಸಶಸ್ತ್ರ ಪೋಲೀಸರಿಂದ ತುಂಬಿವೆ.

ಸಂಕಷ್ಟದಲ್ಲಿರುವ ಮುಷ್ಕರ ನಿರತ ಕಾರ್ಮಿಕರಿಗೆ ಧಾನ್ಯ ನೆರವು ನೀಡಲು ಸಿ.ಐ.ಟಿ.ಯು. ತೀರ್ಮಾನ ಕೈಗೊಂಡಿದೆ. ಈ ನಿರ್ಧಾರವನ್ನು ಸಿ. ಐ. ಟಿಯು. ರಾಜ್ಯಶಾಖೆ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾಯರು ಘೋಷಿಸಿದರು. ದಿ. 17 (ಮಂಗಳವಾರ) ರಂದು ಬೆಂಗಳೂರಿನಲ್ಲಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ಸೂರಿಯವರು ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ತಲಾ 5ಕೆ. ಜಿ. ಧಾನ್ಯ ನೀಡುವ ಯೋಜನೆಯನ್ನು ತಿಳಿಸಿದರು. ಅವರು ಮುಂದುವರೆದು "ನ್ಯಾಯಯುತ ಮುಷ್ಕರವನ್ನು ಸರ್ಕಾರ ತುಳಿಯಲು ಕಂಕಣಬದ್ಧವಾಗಿದೆ. ಪರಿಸ್ಥಿತಿ ಗಂಭೀರ ಮಟ್ಟಕ್ಕೆ ತಲುಪಿದೆ. ಈಗ ಹೋರಾಟ ಹೊಸ ತಿರುವು ಪಡೆಯಬೇಕು. ಕೇವಲ ಜೆ.ಎ.ಎಫ್. (ಜಾಯಿಂಟ್ ಆ್ಯಕ್ಷನ್ ಪ್ರಂಟ್)ನಿಂದ ಮುಷ್ಕರ ಮುಂದುವರಿಸಲು ಸಾಧ್ಯವಿಲ್ಲ. ಅಖಿಲ ಭಾರತ ಮಟ್ಟದಲ್ಲಿ ಮುಷ್ಕರಕ್ಕೆ ಸಿದ್ಧತೆ ನಡೆಸುವುದು ಅವಶ್ಯವಿದೆ" ಎಂದರು.

"ದಿನಾಂಕ 22ರಂದು ದೆಹಲಿಯಲ್ಲಿ ನಡೆಯಲಿರುವ ಕೇಂದ್ರ ಕಾರ್ಮಿಕ ಸಂಘಗಳ ನಾಯಕರ ಸಭೆಯಲ್ಲಿ ಅಖಿಲ ಭಾರತ ಮುಷ್ಕರದ ಬಗ್ಗೆ ತೀರ್ಮಾನವಾಗುವ ಸಾಧ್ಯತೆ ಇದೆ" ಎಂದರು.

ದಮನಕಾರೀ ನೀತಿಯಿಂದ ಕಾರ್ಮಿಕ ಹೋರಾಟವನ್ನು ಹತ್ತಿಕ್ಕುವ ಸರ್ಕಾರದ ನಿಲುವನ್ನು ಉಗ್ರವಾಗಿ ಖಂಡಿಸಿದ ಕಾಂ. ಸೂರ್ಯನಾರಾಯಣ ರಾಯರು" ಪಬ್ಲಿಕ್ ಸೆಕ್ಟಾರ್ ಕಾರ್ಮಿಕರ ಹೋರಾಟ ಇದೇ ಕಾರ್ಮಿಕ ವರ್ಗದ ಹೋರಾಟ"ವಾಗಿದ್ದು ಸಿ.ಐ.ಟಿ.ಯು. ತನ್ನ ಸರ್ವ ವಿಧದ ಬೆಂಬಲವನ್ನು ಹೋರಾಟಕ್ಕೆ ನೀಡುವುದುಎಂದರು.

ಧಾನ್ಯ ಸಂಗ್ರಹಣೆಯ ನಿಮಿತ್ತ ನಗರದ ಬೇರೆ ಬೇರೆ ಕಡೆ ಸಿ.ಐ.ಟಿ.ಯು.ನ ನೇತೃತ್ವದಲ್ಲಿ ನಡೆಯುತ್ತಿರುವ ಸಭೆಗಳ ಅಂಗವಾಗಿ 18-2-81ರಂದು ಕೃಷ್ಣರಾಜಪುರದಲ್ಲಿ ಸಭೆ ನಡೆಯಿತು. ಕಾಂ. ಸೂರಿ ಮಾತನಾಡಿದರು.

○

ಎಸ್.ಎಫ್.ಐ. ಸಭೆ

7-2-81ರಂದು ನಡೆದ ದ. ಕ. ಜಿಲ್ಲೆಯ ಕುಂದಾಪುರದಲ್ಲಿ ತಾಲ್ಲೂಕು ಎಸ್.ಎಫ್.ಐ. ಸಮಿತಿಯು ಸಭೆ ಸೇರಿ, ಜೀವವಿಮಾ ನೌಕರರ ಮತ್ತು ವೈದ್ಯ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು. ವಿದ್ಯಾರ್ಥಿಗಳು ವಿಮಾ ನೌಕರರ ಸಂಘದ ಸ್ಥಳೀಯ ಕಾರ್ಯದರ್ಶಿಯವರನ್ನು ಭೇಟಿಮಾಡಿ ತಮ್ಮ ಬೆಂಬಲ ವ್ಯಕ್ತಪಡಿಸಿದರು. ○

ಕಾರ್ಯಕಾರಿ ಸಮಿತಿ ಸಭೆ

ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿಯ ಸಭೆಯು 16-2-81ರಂದು ಚಿಕ್ಕಮಂಗಳೂರಿನಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಕಾಂ. ವಿಶ್ವನಾಥರು ವಹಿಸಿದ್ದರು.

ದೇಶದ, ರಾಜ್ಯದ ಪ್ರಸಕ್ತ ಪರಿಸ್ಥಿತಿಯನ್ನು ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪನವರು ವಿವರಿಸಿದರು. ಜನವರಿ 20ರಂದು ನಡೆದ ತೋಟಕಾರ್ಮಿಕರ ಮುಷ್ಕರ, 30-1-81 ಮತ್ತು 11-2-81 ರಂದು ಬೆಂಗಳೂರಿನಲ್ಲಿ ನಡೆದ ತ್ರಿಪಕ್ಷೀಯ ಮಾತುಕತೆಗಳ ಬಗ್ಗೆ ವರದಿ ನೀಡಿದರು.

ಉಪಾಧ್ಯಕ್ಷ ಎ.ಸಿ. ಕೇಶವರು ತಮ್ಮ ಪೂರಕ ವರದಿಯಲ್ಲಿ ತೋಟ ಕಾರ್ಮಿಕರ ಮುಷ್ಕರ ಮತ್ತು ವಿವಿಧ ತೋಟಗಳ ಕಾರ್ಮಿಕರ ಸಮಸ್ಯೆಗಳ ಬಗ್ಗೆ ವಿವರಣೆ ನೀಡಿದರು.

ಹರಿಹರದಲ್ಲಿ ನಡೆಯಲಿರುವ ಸಿ. ಐ. ಟಿ. ಯು. ರಾಜ್ಯಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಕಾಂ. ಟಿ. ರಾಮು, ಮಾರಿಮುತ್ತು, ಬಾಂಕಿ, ಪದ್ಮ ಮುತ್ತು, ಕಾಂ. ಎ. ಸಿ. ಕೇಶವ ಇವರನ್ನು ಚುನಾಯಿಸಲಾಯಿತು.

ರೇಲ್ವೆ ಮುಷ್ಕರ

[3-2-81ರಂದು ದೆಹಲಿಯಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಉದ್ದೇಶಿಸಿ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಬಿ. ಟಿ. ರಣದಿವೆ ಮಾತನಾಡಿದರು. ಆ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ]

ಮುಷ್ಕರ ನಿರತ "ಲೋಕೋ ರನ್ನಿಂಗ್ ಸ್ಟಾಫ್"ನವರ ಮೇಲೆ ಸರಕಾರದ ಅತಿ ಹೇಯ ದಮನ ಕಾರ್ಯವನ್ನು ಸಿ.ಐ.ಟಿ.ಯು. ಉಗ್ರವಾಗಿ ಖಂಡಿಸುತ್ತದೆ. ಲೋಕೋ ರನ್ನಿಂಗ್ ಸ್ಟಾಫ್ ರೇಲ್ವೆ ನೌಕರರ ಸಮರಶೀಲ ಸಂಘಟನೆಯಾಗಿದ್ದು ಇವರ ವಿರೋಚಿತ ಹೋರಾಟವನ್ನು ಬಗ್ಗು ಬಡಿಯಲು ನೂರಾರು ಕಾರ್ಯಕರ್ತರನ್ನು ಬಂಧಿಸಲಾಗಿದೆ.

1973ರ ಆಗಸ್ಟ್ ಹೋರಾಟದ ನಂತರ ಸರ್ಕಾರವು ಆಲ್ ಇಂಡಿಯಾ ಲೋಕೋ ರನ್ನಿಂಗ್ ಸ್ಟಾಫ್ ಅಸೋಸಿಯೇಷನ್'ನೊಟ್ಟಿಗೆ ಒಪ್ಪಂದ ಮಾಡಿಕೊಂಡ ಕೆಲಸದ ಅವಧಿಯ ಮಿತಿಗೆ ಮತ್ತು ಕೆಲವು ಬೇಡಿಕೆಗಳಿಗೋಸ್ಕರ ಗ್ರೀವೆನ್ಸ್ ಕಮಿಟಿ ರಚಿಸಲು ಒಪ್ಪಿಕೊಂಡಿತ್ತು. ಈ ಒಪ್ಪಂದವನ್ನು ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸರ್ಕಾರವು ಮುರಿಯಿತು. ಗ್ರೀವೆನ್ಸ್ ಕಮಿಟಿಯನ್ನು ಕಿತ್ತುಹಾಕಲಾಯಿತು. ಜನತಾ ಸರ್ಕಾರದ ಆಡಳಿತದ ಅವಧಿಯಲ್ಲೂ ಅನೇಕ ಸಲ ಮನವಿ ಮಾಡಿಕೊಂಡರೂ ಫಲಕಾರಿಯಾಗಲಿಲ್ಲ. ಕಾರಣ ಎ.ಐ.ಎಲ್.ಆರ್.ಎಸ್.ಎ. (All India Loco Running Staff Association) ಹೋರಾಟದ ಮಾರ್ಗ ಹಿಡಿಯಲೇ ಬೇಕಾಯಿತು. 26 ಮಾರ್ಚ್ 1979ರಂದು ರೇಲ್ವೆ ಬೋರ್ಡ್ ಚೇರ್‌ಮನ್‌ರು, ಕೆಲಸದ ಅವಧಿ, ವೇತನ ಪರಿಷ್ಕರಣ ಮುಂತಾದ ಬೇಡಿಕೆಗಳಿಗಾಗಿ ಖಚಿತ ಆಶ್ವಾಸನೆ ಕೊಟ್ಟಿದ್ದರು. ಎಪ್ರಿಲ್ 80ರಲ್ಲಿ ಈ ಬಗ್ಗೆ ರಚಿಸಿದ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ವೇತನ ಪರಿಷ್ಕರಣಕ್ಕೆ ತನ್ನ ಒಪ್ಪಿಗೆ ನೀಡಿತ್ತು. ಇದೂ ಕಾರ್ಯಗತವಾಗಲಿಲ್ಲ.

ಜುಲೈ 1980ರಲ್ಲಿ ಒಪ್ಪಂದವಾದ ವೇತನ ಪರಿಷ್ಕರಕ್ಕೆ ಮತ್ತು ಬೇರೆ ಬೇರೆ ಬೇರೆ ಸಮಿತಿಗಳು ಮೈಲೇಜ್ ಅಲವನ್ಸ್ ಬಗ್ಗೆ ಮಾಡಿದ ಶಿಫಾರಸುಗಳನ್ನು ಜಾರಿಗೆ ಮಾಡಲಿಲ್ಲ. ಸರ್ಕಾರದ ಧೋರಣೆಯ ಬಗ್ಗೆ ರೋಸಿದ ಎ. ಐ. ಎಲ್. ಆರ್. ಎಸ್. ಎ.ನ ವರ್ಕಿಂಗ್ ಕಮಿಟಿ 8-1-81ರಂದು ದೆಹಲಿಯಲ್ಲಿ ಸಭೆಸೇರಿ ಪರಿಸ್ಥಿತಿಯನ್ನು ಅವಲೋಕಿಸಲಾಯಿತು. ಸಮಸ್ಯೆಗಳನ್ನು ಸುಮುಖವಾಗಿ ಇತ್ಯರ್ಥ ಮಾಡುವಂತೆ ರೇಲ್ವೆ ಬೋರ್ಡ್ ಚೇರ್ ಮನ್‌ರನ್ನು, ರೇಲ್ವೆ ಮಂತ್ರಿಯನ್ನು ವಿನಂತಿಸಿಕೊಂಡರೂ ಫಲಕಾರಿಯಾಗಲಿಲ್ಲ.

ತಲ್‌ಚೇರ್‌ನಲ್ಲಿ, ರೇಲ್ವೆ ಕಾಲನಿಯ ಮೂರು ಮಹಿಳೆಯರನ್ನು ಮಾನಭಂಗ ಮಾಡಿರುವುದನ್ನು 9-1-81ರಂದು ಪ್ರತಿಭಟಿಸಲಾಯಿತು. ಮಾನಭಂಗಕ್ಕೆ ಕಾರಣರಾದ ಸಮಾಜಘಾತಕ ಶಕ್ತಿಗಳ ಮೇಲೆ ಕ್ರಮಕೈಗೊಳ್ಳದೇ ಇರುವುದನ್ನು ಪ್ರತಿಭಟನೆ ಮಾಡಿದ ಕಾರಣ ಆಡಳಿತ ವರ್ಗವು ಮೂವರ ಸ್ಟಾಫ್‌ನವರನ್ನು ಕೆಲಸದಿಂದ ಸಸ್ಪೆಂಡ್ ಮಾಡಿತು. ಖುರದಾ ಮತ್ತು ಭದ್ರಕ್‌ನಲ್ಲಿ ಸೌಹಾರ್ದ ಮುಷ್ಕರ ನಡೆದವು.

14-1-81ರಂದು ಆಡಳಿತ ಮಂಡಳಿಯು ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಸಾಂತ್ರಾಗಾಚಿ-ಖರಗಪುರ ವಿಭಾಗದಲ್ಲಿ ಪ್ರತಿಭಟಿಸಲಾಯಿತು. ರೇಲ್ವೆ ಸಂಚಾರ ಅಸ್ತವ್ಯಸ್ತವಾಯಿತು. ಪಶ್ಚಿಮ ಬಂಗಾಳದ ರಾಜ್ಯ ಸರ್ಕಾರವು ಮಧ್ಯ ಪ್ರವೇಶಿಸಿ ರೇಲ್ವೆ ಸಂಚಾರ ಸುಗಮವಾಗುವಂತೆ ಮಾಡಿತು. ಆದರೆ ಆಡಳಿತ ಮಂಡಳಿಯು ಇಲ್ಲಿಯೂ ಕೆಲವರನ್ನು ಕೆಲಸದಿಂದ ವಜಾ ಮಾಡಿತು. ಖುರದಾನಲ್ಲೂ ಬಂಧನ ಪತ್ರ ನಡೆಯಿತು. ಪ. ಬಂಗಾಳದ ಕಾರ್ಮಿಕ ಮಂತ್ರಿ ಮಧ್ಯ ಪ್ರವೇಶಿಸಿ ಸೌಹಾರ್ದಪೂರಿತವಾಗಿ ಸಮಸ್ಯೆ ಇತ್ಯರ್ಥಗೊಳಿಸಲು ಪ್ರಯತ್ನಿಸಿದರೂ ಸೌಥ್-ಈಸ್ಟ್ ರೇಲ್ವೆ ಆಡಳಿತಾಧಿಕಾರಿಗಳು ಸಸ್ಪೆನ್ಷನ್ ವಾಪಸು ತೆಗೆದುಕೊಳ್ಳಲಿಲ್ಲ. ಕಾರಣ ಪರಿಸ್ಥಿತಿ ಉಲ್ಬಣಿಸಿ 19-1-1981ರಂದು ಮುಷ್ಕರದ ನೋಟಿಸ್ ಕೊಡಲಾಯಿತು.

ಸದರನ್ ರೇಲ್ವೆಯ ಪಾಲ್‌ಘಾಟ್ ವಿಭಾಗದಲ್ಲೂ, ಹಿಂದೆ ಕೆಲಸದಿಂದ ವಜಾ ಮಾಡಿದವರನ್ನು ವಾಪಸ್ ತೆಗೆದುಕೊಳ್ಳದಿರುವದರ ಬಗ್ಗೆ ಪ್ರತಿಭಟನೆ ಪ್ರಾರಂಭವಾಯಿತು. 25-1-81ರೊಳಗೆ ಒಪ್ಪಂದಕ್ಕೆ ಬರದಿದ್ದಲ್ಲಿ ಅನಿರ್ದಿಷ್ಟ ಅವಧಿಯ ಮುಷ್ಕರ ಹೂಡಲಾಗುವ ಎಚ್ಚರಿಕೆಯ ನೋಟಿಸನ್ನು 5-1-81ರಂದು ಕೊಡಲಾಯಿತು.

ಈಸ್ಟರ್ನ ಮತ್ತು ಎನ್.ಎಫ್. ರೇಲ್ವೆಗಳಲ್ಲಿಯೂ ಕೆಲಸದಿಂದ ವಜಾ ಮಾಡುವ ಮೊದಲಾದ ಕ್ರಮಗಳನ್ನು ಆಡಳಿತ ಮಂಡಳಿ ಕೈಗೊಂಡಿತು. ಆಡಳಿತ ಮಂಡಳಿಯ ಈ ನ್ಯಾಯಬಾಹಿರ, ಅನ್ಯಾಯದ ಕ್ರಮಗಳ ವಿರುದ್ಧ ಎ. ಐ. ಎಲ್. ಆರ್.ಎಸ್.ಎ.ನ ಪ್ರಧಾನಕಾರ್ಯದರ್ಶಿಯು ಅನೇಕ ಸಲ ಮನವಿ ಮಾಡಿದರೂ ಸರ್ಕಾರ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. 21-1-81 ಮತ್ತು 24-1-81ರಂದು ರೈಲ್ವೆ ಬೋರ್ಡ್ ಚೇರಮನ್ ಮತ್ತು ರೈಲ್ವೆ ಮಂತ್ರಿ ಕಲಕತ್ತೆಗೆ ಭೇಟಿಕೊಟ್ಟಾಗ ಭೇಟಿಗೆ ವಿನಂತಿಸಿಕೊಂಡಿದ್ದರೂ ಅವಕಾಶ ಸಿಗಲಿಲ್ಲ. ಕಾಂ. ಸಮರ್‌ಮುಖರ್ಜಿ (ಎಂ. ಪಿ.)ಯವರು ಈ ಬಗ್ಗೆ ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ. ಸಮರಶೀಲ ರೈಲ್ವೆ ಕಾರ್ಮಿಕರನ್ನು ಹತ್ತಿಕ್ಕಲು ಸರ್ಕಾರ ಪೂರ್ವಯೋಜಿತ ಸಂಚನ್ನು ಹೂಡಿರುವುದು. ಇದರಿಂದ ಸ್ಪಷ್ಟವಾಗುತ್ತದೆ. ಕೊನೆಗೆ ಅನಿವಾರ್ಯವಾಗಿ ಎ.ಐ.ಎಲ್.ಆರ್.ಎಸ್.ಎ.ನ ಪ್ರಧಾನಕಾರ್ಯದರ್ಶಿಯವರು 25-1-81ರೊಳಗೆ ಸಮಸ್ಯೆ ಪರಿಹಾರವಾಗದಿದ್ದರೆ ಮುಷ್ಕರ ಹೂಡುವ ನಿರ್ಧಾರ ಪ್ರಕಟಿಸಿದರು.

ದೇಶಾದ್ಯಂತ ಎಲ್.ಆರ್.ಎಸ್.ನವರು ಹೋರಾಟದಲ್ಲಿ ಪಾಲ್ಗೊಂಡರು. ಸಂಧಾನಕ್ಕೆ ಯತ್ನಿಸುವ ಬದಲು ನಿರ್ದಯವಾಗಿ ಹೋರಾಟವನ್ನು ತುಳಿಯುವತ್ತ ಸರ್ಕಾರ ಸಾಗಿದೆ. ಸಕ್ರಿಯ ಕಾರ್ಯಕರ್ತರನ್ನು ಎನ್.ಎಸ್.ಎ. ಮೂಲಕ ಬಂಧಿಸಲಾಗಿದೆ. ನೂರಾರು ಜನರನ್ನು ವಜಾಮಾಡಲಾಗಿದೆ. ದೆಹಲಿಯ ಸಂಘದ ಕಚೇರಿ ಮೇಲೆ ಪೋಲೀಸರು ದಾಳಿಮಾಡಿದ್ದಾರೆ. ರೈಲುಗಳನ್ನು ಓಡಿಸಲು ಕುಶಲರಲ್ಲದ ಚಾಲಕರನ್ನು, ಸೈನಿಕರನ್ನು ನಿಯಮಿಸಿದ್ದರಿಂದ ಅಪಘಾತ ಸಂಭವ ಹೆಚ್ಚಾಗಿವೆ. ಈ ಹೋರಾಟ 1974ರ ವಿರೋಚಿತ ಹೋರಾಟದ ನೆನಪನ್ನು ತರುತ್ತದೆ.

ತಮ್ಮ ಮೂಲಭೂತ ಹಕ್ಕುಗಳಿಗಾಗಿ, ಕೆಲಸದ ಭದ್ರತೆಗಾಗಿ, ಸಂಘಟನೆಯ ಉಳಿವಿಗಾಗಿ ದೇಶಾದ್ಯಂತ ವಿರೋಚಿತ ಹೋರಾಟ ನಡೆಸಿರುವ ರೈಲ್ವೆಯ ಲೋಕೋರನ್ನಿಂಗ್ ಸ್ಟಾಫ್‌ನವರನ್ನು ಸಿ.ಐ.ಟಿ.ಯು. ಅಭಿನಂದಿಸುತ್ತದೆ. ದಮನಕಾರಿ ಕ್ರಮಗಳನ್ನು ಕೈಬಿಟ್ಟು ಸೌಹಾರ್ದಯುತ ಒಪ್ಪಂದಕ್ಕೆ ಬರುವಂತೆ ಸಿ.ಐ.ಟಿ.ಯು. ಒತ್ತಾಯಿಸುತ್ತದೆ. ಸರ್ಕಾರದ ಭಯೋತ್ಪಾದಕ ಕ್ರಮಗಳನ್ನು ದೃಢವಾಗಿ ಎದುರಿಸಿ, ಐಕ್ಯತೆಯಿಂದ ಹೋರಾಟ ಮುಂದುವರೆಸುವಂತೆ ಕರೆ ನೀಡುತ್ತದೆ. ಆಗ ಮಾತ್ರ ಸರ್ಕಾರ ತಾನೇ ಮಾಡಿಕೊಂಡ ಒಪ್ಪಂದಕ್ಕೆ ಮಾನ್ಯತೆ ನೀಡುವದು.

ಲೋಕೊ ರನ್ನಿಂಗ್ ಸ್ಟಾಫ್‌ನವರ ವಿರೋಚಿತ ಹೋರಾಟಕ್ಕೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ದೃಢವಾದ ಬೆಂಬಲಕೊಡಬೇಕೆಂದು ಸಿ.ಐ.ಟಿ.ಯು. ವಿನಂತಿಸಿಕೊಳ್ಳುತ್ತದೆ, ಜಿನೇವಾದಲ್ಲಿರುವ ಐ.ಎಲ್.ಓ. (International Labour Organatition) ಡೈರೆಕ್ಟರ ಜನರಲ್‌ರಿಗೂ, ಒಪ್ಪಂದಕ್ಕೆ ಶ್ರಮಿಸುವಂತೆ ಟೆಲಿಗ್ರಾಂ ಕಳಿಸಿದೆ.

o

ಚಂದಾ ವಿವರ

ವಾರ್ಷಿಕ ಚಂದಾ	: 25ರೂ.
6 ತಿಂಗಳಿಗೆ	: 13ರೂ.
ಬಿಡಿ ಪ್ರತಿ	: 50 ಪೈಸೆ

ಹೋರಾಟಕ್ಕೆ ಸಿದ್ಧತೆ

(1ನೇ ಪುಟದಿಂದ)

ದ್ದಾರೆ. ಆದರೆ ಇನ್ನೂ ಹೆಚ್ಚಿನ ತೆರಿಗೆ ವಿಧಿಸಬೇಕಾಗಾದಲೆಲ್ಲಾ, ಮೊದಲ ಗುರಿಯಾದಾಗಲೂ ಇದೇ ವರ್ಗದ ಜನ ರೈಲ್ವೇ ಮತ್ತು ಟೆಲಿಫೋನ್ ವಿಭಾಗಗಳು ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸಲು ಸೂಚಿಸಲಾಗಿದೆ. ಸ್ವಾಭಾವಿಕವಾಗಿಯೇ ಇದನ್ನು "ಸೂಕ್ತವಾದ ಬೆಲೆ ನಿರ್ಧಾರದ ನೀತಿಗಳಿಂದಲೇ" ಮಾಡಲಾಗುವುದು.

ವಿದ್ಯುಚ್ಛಕ್ತಿ ಬೋರ್ಡುಗಳಿಗೆ ಅವುಗಳ ನಷ್ಟಭರಿಸಲು ದರಗಳನ್ನು ಏರಿಸಲು ಸೂಚಿಸಲಾಗಿದೆ. ನೀರಾವರಿ ಇಲಾಖೆಗೆ, ನೀರಿನ ದರಗಳನ್ನು ಏರಿಸಲು ಸೂಚಿಸಲಾಗಿದೆ. ರಾಜ್ಯ ರಸ್ತೆ ಸಾರಿಗೆ ಕಾರ್ಪೋರೇಷನ್‌ಗಳಿಗೆ ಅದರ ಟಿಕೇಟ್ ದರಗಳನ್ನು ಪುನಪರಿಶೀಲಿಸಲು ಸೂಚಿಸಲಾಗಿದೆ. ಇದನ್ನು ಈಗಾಗಲೇ ಲಾಠಿಪಟ್ಟು ಮತ್ತು ಗುಂಡಿನೇಟುಗಳ ಮಧ್ಯೆ ಜಾರಿಗೆ ತರಲಾಗಿದೆ. ಆಹಾರ ಪದಾರ್ಥಗಳು ಮತ್ತಿತರ ಅವಶ್ಯಕ ವಸ್ತುಗಳಿಗೆ ಸಬ್ಸಿಡಿ ಕಡಿಮೆಮಾಡಲು ಯೋಜನಾಕಾರರು ಒತ್ತಾಯಿಸಿದ್ದಾರೆ. "1980-81ರ ಬಜೆಟ್ ಅವಧಿಯಲ್ಲಿ ಕೊಟ್ಟಕ್ಕಿಂತ ಗಣನೀಯವಾಗಿ ಸಬ್ಸಿಡಿ ಇಳಿಸುವುದು ಯೋಜನೆಗೆ ಅಧಿಕ ಸಂಪನ್ಮೂಲಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಅನಿವಾರ್ಯವಾಗಿದೆ". ಇದರಿಂದ ಬೆಲೆಗಳು ಏರುತ್ತವೆ. ಆಹಾರ ಪದಾರ್ಥಗಳ ಸಬ್ಸಿಡಿ ಹಿಂದೆ ತೆಗೆದುಕೊಳ್ಳಬೇಕೆಂಬುದು ವಿಶ್ವಬ್ಯಾಂಕಿನ ಪ್ರಮುಖ ಸಲಹೆಗಳಲ್ಲೊಂದು. ಇದನ್ನು ಸ್ವತಂತ್ರ ಭಾರತ ಅನುಸರಿಸಬೇಕಾಗಿದೆ ಎಂಬುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು.

ಸಂಪನ್ಮೂಲಗಳ ಸಂಗ್ರಹ ಇಲ್ಲಿಗೆ ಮುಗಿಯಲಿಲ್ಲ. ಬ್ಲಾಕ್ ಮಟ್ಟದ ಸಮಿತಿಗಳು ಮತ್ತು ಪಂಚಾಯತುಗಳು ಸಹ ಕೆಲವು ವಿಶಿಷ್ಟ ಸಂಪನ್ಮೂಲಗಳನ್ನು ಸಂಗ್ರಹಿಸಬೇಕೆಂದು ಅಭಿಪ್ರಾಯಪಡಲಾಗಿದೆ. ಸ್ಥಳೀಯ ಆಡಳಿತಗಳಿಗೆ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಹಾಯಕವಾಗುವಂತೆ, ನಗರಗಳಲ್ಲಿ ಬಾಡಿಗೆ ನಿಯಂತ್ರಣ ಕಾಯಿದೆಗಳನ್ನು ತೆಗೆದುಹಾಕಬೇಕು ಅಥವಾ ಸೂಕ್ತವಾಗಿ ಮಾರ್ಪಡಿಸಬೇಕು ಎಂದು ಯೋಜನಾಕಾರರ ಕೊನೆಯ, ಆದರೆ ಯಾವುದೇ ರೀತಿಯಲ್ಲಿ ಜನರನ್ನು ತಟ್ಟುವ ಪರಿಣಾಮ ದೃಷ್ಟಿಯಿಂದ ಕಡಿಮೆಯಿಲ್ಲದ ಸಲಹೆ.

[ಮುಂದುವರೆಯುವುದು]

ಸಂಪಾದಕೀಯ

(1ನೇ ಪುಟದಿಂದ)

ಹೇಗಿದೆ ಸಲಹೆ ?

"ನೀವು ಹೋರಾಟದ ಹಾದಿಹಿಡಿಯಬೇಡಿ. ಈ ಮೂವತ್ತಮೂರು ವರ್ಷಗಳಲ್ಲಿ ಕಾಂಗ್ರೆಸ್ಸ್ ಸರ್ಕಾರಗಳನ್ನೂ ಕಾಂಗ್ರೆಸ್ಸ್ ಮುಂದಾಳುಗಳನ್ನೂ ನಂಬಿ ಬಂದಂತೆ ಇನ್ನೂ ನಂಬಿಕೊಂಡು ಬನ್ನಿ".

ಏನೂ ಸಾಧಿಸಲಿಲ್ಲ.

ಇದೊಂದು ತಮಾಷೆ.

ಆದರೆ, ಈ ಮಹಾ ತಮಾಷೆಯ ಹಿಂದೆ ಒಂದು ಯೋಜನೆ (ಪ್ಲಾನು) ಇದೆ.

ರೈತರು ಕಳೆದ ಒಂದು ವರ್ಷದಿಂದ ದೇಶದ ಹೆಚ್ಚಿನ ಭಾಗಗಳಲ್ಲಿ ತಮ್ಮ ಸ್ವಂತ ಅನುಭವದ ಆಧಾರದಲ್ಲಿ ಕಂಡುಹಿಡಿದ 'ಹೋರಾಟದ ಹಾದಿ'ಯಿಂದ ರೈತರನ್ನು ವಿಮುಖಗೊಳಿಸುವುದೇ ಈ ತಮಾಷೆಯ ಹಿಂದಿದ್ದ ಯೋಜನೆ ಎಂಬುದರಲ್ಲಿ ಏನೂ ಸಂಶಯವಿಲ್ಲ.

ಈ 'ಪ್ಲಾನು' ಯಶಸ್ವಿಯಾಯಿತೇ ?

ಯಶಸ್ವಿಯಾಗಲಿಲ್ಲ-ಯಶಸ್ವಿಯಾಗಲು ಸಾಧ್ಯವಿಲ್ಲ. ದೇಶದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯ ಒತ್ತಡವೇ ರೈತರನ್ನು ಹೋರಾಟಕ್ಕೆ ಇಳಿಸಿದ ಒಂದೇ ಒಂದು ಕಾರಣವಾದುದರಿಂದ.

ಸಿ.ಐ.ಟಿ.ಯು. ರಾಜ್ಯ ಸಮ್ಮೇಳನ

ಮಾರ್ಚ್ 5 ರಿಂದ 8ನೆಯ ತಾರೀಖಿನವರೆಗೆ ಹರಿಹರದಲ್ಲಿ ನಡೆಯಲಿರುವ ಸಿ.ಐ.ಟಿ.ಯು. ಮೂರನೇ ರಾಜ್ಯ ಸಮ್ಮೇಳನವನ್ನು

ಕಾಂ. ಬಿ. ಟಿ. ರಣದಿವೆ

ಇವರು ಉದ್ಘಾಟಿಸುವರು

ಕೊನೆಯದಿನ (8ರಂದು) ನಡೆಯುವ ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ಉಪಾಧ್ಯಕ್ಷ ಮತ್ತು ಪ. ಬಂಗಾಳದ ಮುಖ್ಯಮಂತ್ರಿ

ಕಾಂ. ಜ್ಯೋತಿ ಬಸು

ಇವರು ಮಾತನಾಡಲಿರುವರು

ಇನ್ನೂ ಸಿ.ಐ.ಟಿ.ಯು.ಗೆ ಸಂಯೋಜಿತವಾಗದಿರುವ ಸಂಘಗಳು ವೀಕ್ಷಕರನ್ನು ಕಳುಹಿಸುವ ಬಗ್ಗೆ ರಾಜ್ಯ ಕೇಂದ್ರವನ್ನು ಸಂಪರ್ಕಿಸಬಹುದು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT